# ಶ್ರೀ ಶಂಕರಸಿದ್ಧಾನ್ತಃ

ಲೇಖಕರು :

**ಶ್ರೀ ಶ್ರೀ ಜ್ಞಾನಾನಂದೇಂದ್ರಸರಸ್ವತೀಸ್ವಾಮೀಜಿ**

ಪ್ರಕಾಶಕರು :

**ಶ್ರೀ ವೈ. ವಿ. ಶಂಕರನಾರಾಯಣ,** ಬಿ.ಇ.,
ಸೂಪರಿಂಟೆಂಡೆಂಟ್ ಇಂಜನೀಯರ್,
ಹಿಂದೂಸ್ಥಾನ್ ಷಿಪ್‌ಯಾರ್ಡ್,
ಚೀಫ್ ಇಂಜನಿಯರ್ ಆಫೀಸ್,
ಪೋಸ್ಟ್ : ಗಾಂಧಿಗ್ರಾಮ್,
ವಿಶಾಖಪಟ್ಟಣ-೫ (ಆಂಧ್ರ ಪ್ರದೇಶ)

ಶಂಕರಂ ಶಂಕರಾಚಾರ್ಯಮಜ್ಞಾನಧ್ವಾನ್ತಭಾಸ್ಕರಮ್ |
ಸಚ್ಚಿದಾನಂದಯೋಗೀನ್ದ್ರಂ ನಮಾಮೀಪ್ಸಿತಸಿದ್ಧಯೇ ||
ಅಧ್ಯಾಸರೂಪಮಜ್ಞಾನಂ ಯೇನೇದಂ ಪ್ರಕಟೀಕೃತಮ್ |
ಕೃಷ್ಣಸ್ವಾಮ್ಯಯ್ಯರಾಖ್ಯಂಚ ಜ್ಞಾನಿನಂ ಜ್ಞಾನದಂ ಭಜೇ ||

**ಈ ಪುಟ್ಟ ಪುಸ್ತಕವನ್ನು**

ನನ್ನ ಗುರುಗಳಾದ ಶ್ರೀಮತ್ಪರಮಹಂಸ-

ಪರಿವ್ರಾಜಕಾಚಾರ್ಯವರ್ಯರಾದ

**ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ**

**ಮತ್ತು**

**ಶ್ರೀ ಕೆ. ಏ. ಕೃಷ್ಣಸ್ವಾಮ್ಯಯ್ಯರವರ**

**ಪಾದಾರವಿಂದಗಳಲ್ಲಿ ಸಮರ್ಪಿಸಿದ್ದೇನೆ.**

ದುರ್ಮತಿನಾಮ ಸಂವತ್ಸರದ
ಭಾದ್ರಪದ ಶುಕ್ಲ ಪೂರ್ಣಿಮಾ
ಇಂದುವಾಸರಃ
೧೪-೯-೧೯೮೧
ಬೆಂಗಳೂರು—೫೬೦೦೨೮

**ಶ್ರೀ ಜ್ಞಾನಾನಂದೇಂದ್ರಸರಸ್ವತೀ**
**ಸ್ವಾಮೀಜಿ**
ಅಧ್ಯಾತ್ಮಪ್ರಕಾಶ ಶಾಖಾ ಕಾರ್ಯಾಲಯ

# ಮುನ್ನುಡಿ

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯರಾದ ಶ್ರೀ ಶ್ರೀ ಜ್ಞಾನಾನಂದೇಂದ್ರಸರಸ್ವತೀಸ್ವಾಮಿಗಳನ್ನು ನಾನು ಬಹುವರ್ಷಗಳಿಂದ ತಿಳಿದಿದ್ದೇನೆ. ಇವರು ಸುಮಾರು ೬೦, ೭೦ ವರ್ಷಗಳಕಾಲ ಪ್ರಸ್ಥಾನತ್ರಯ ಭಾಷ್ಯಗಳನ್ನು ಶಿಷ್ಯರಿಗೆ ಪಾಠವನ್ನು ಹೇಳಿದ್ದಾರೆ. ಇವರು ಈಗ ಇಂಗ್ಲೀಷಿನಲ್ಲಿಯೂ ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ **ಶಂಕರಸಿದ್ಧಾಂತ**ವೆಂಬ ಪುಟ್ಟ ಗ್ರಂಥವನ್ನು ರಚಿಸಿರುತ್ತಾರೆ. ಇದರಲ್ಲಿ ಆತ್ಮಾನಾತ್ಮರ ಅಧ್ಯಾಸವೇ ಅವಿದ್ಯಾ. ಈ ಅವಿದ್ಯೆಯು ಸರ್ವರ ಅನುಭವದಲ್ಲಿರುತ್ತದೆ. ಇದಕ್ಕೆ ಪ್ರತಿಪತ್ತಿಕ್ರಮದಿಂದ ತತ್ತ್ವಜ್ಞಾನವೇ ಕಾರಣ. ಇದಕ್ಕೆ ಇನ್ನು ಬೇರೆ ಉಪಾದಾನಕಾರಣವಿಲ್ಲ. ಈ ಅಧ್ಯಾಸವನ್ನು ಆಶ್ರಯಿಸಿಯೇ ನಮ್ಮ ಲೌಕಿಕ ವೈದಿಕ ವ್ಯವಹಾರವು ನಡೆಯುತ್ತಿದೆ. ಮೋಕ್ಷ ವ್ಯವಹಾರವೂ ಸಹ ಈ ಅಧ್ಯಾಸವನ್ನು ಆಶ್ರಯಿಸಿಯೇ ನಡೆಯುತ್ತಿದೆ. ಈ ಅಜ್ಞಾನವನ್ನು ಕಳೆಯಲು ಅನುಭವಪರ್ಯನ್ತವಾದ ತತ್ತ್ವಜ್ಞಾನವೇ ಸಾಧನ — ಎಂಬ ವಿಷಯವನ್ನೂ, ಇಂದ್ರಿಯಗಳು ನಾವು ತಿಂದ ಅನ್ನರಸದಿಂದ ಆದವುಗಳು. ಇಂದ್ರಿಯಗಳ ಮೂಲಕ ಪ್ರಪಂಚವನ್ನು ನೋಡಿದರೆ ತಮ್ಮ ಉತ್ಪತ್ತಿಗೆ ಕಾರಣವಾದ ಪ್ರಪಂಚವನ್ನು ಸತ್ಯವಾದದ್ದನ್ನಾಗಿಯೇ ಹೇಳುತ್ತವೆ. ಯಾರು ಇಂದ್ರಿಯಗಳನ್ನು ಪ್ರಪಂಚಪಕ್ಷಕ್ಕೆ ಸೇರಿಸಿ ತಾವು ಕೇವಲಾತ್ಮರಾಗಿ ನಿಂತು ನೋಡುತ್ತಾರೆಯೋ ಅವರು ಪ್ರಪಂಚವನ್ನು ಕಾಣುವದಿಲ್ಲ ಎಂದೂ ಹೇಳುತ್ತಾರೆ. ಪ್ರಪಂಚವು ಇಲ್ಲದ್ದು, ಇದ್ದಂತೆ ತೋರತಕ್ಕದ್ದು ಎಂದು ಹೇಳುತ್ತಾರೆ. ಎಂಬ ವಿಷಯವನ್ನು ಪ್ರಪಂಚವನ್ನು ನೋಡುವವರು ದೇಹೇಂದ್ರಿಯಾದಿಗಳನ್ನು ನಾವು ಮತ್ತು ನಮ್ಮವು ಎಂಬ ಭ್ರಾಂತಿಯನ್ನು ಹೊಂದಿದವರು, ಇವರು ನೋಡಿದಮಾತ್ರಕ್ಕೆ ಪ್ರಪಂಚವು ಇರುತ್ತದೆಯೇ? ಇಲ್ಲ. ಈ ಭ್ರಾಂತರು ನೋಡಿದಮಾತ್ರದಿಂದ ಇರುವದಲ್ಲ.

ಬರೀ ತೋರುವಿಕೆ ಮಾತ್ರವುಳ್ಳದ್ದು ಎಂದೂ ಹೇಳುತ್ತಾರೆ. ಎಂಬೀ ವಿಷಯ ಗಳನ್ನು ಸುಲಭವಾಗಿ ತಿಳಿಯುವಂತೆ ಪ್ರತಿಪಾದಿಸಿರುತ್ತಾರೆ.

ಮುಮುಕ್ಷುಗಳು ಇದನ್ನು ಓದಿ ಕೃತಾರ್ಥರಾಗಬೇಕೆಂದು ನನ್ನ ಹೃತ್ಪೂರ್ವಕವಾದ ಆಶಯ. ಇದನ್ನು ಓದಿದರೆ ಈ ವಿಷಯಗಳು ಅವರಿಗೇ ಗೊತ್ತಾಗುತ್ತವೆ.

ಬೆಂಗಳೂರು
೧೪–೯–೮೧

(Sd.) **ಶ್ರೀ ಶ್ರೀ ಮೂರ್ತಿಗಳು**
ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

ಈ ಪುಸ್ತಕ ದೊರೆಯುವ ಸ್ಥಳ :

೧) **ಶ್ರೀ ವೈ. ವಿ. ಶಂಕರನಾರಾಯಣ, ಬಿ.ಇ.,**
ಸೂಪರಿಂಟೆಂಡೆಂಟ್ ಇಂಜಿನಿಯರ್,
ಹಿಂದೂಸ್ತಾನ್ ಷಿಪ್‌ಯಾರ್ಡ್,
ಚೀಫ್ ಇಂಜನಿಯರ್ ಆಫೀಸ್,
ಪೋಸ್ಟ್ : ಗಾಂಧಿಗ್ರಾಮ್,
ವಿಶಾಖಪಟ್ಟಣ-೫ (ಆಂಧ್ರ ಪ್ರದೇಶ)

೨) **ವೇದಾಂತ ಬುಕ್ ಹೌಸ್,**
ವೇದಾಂತ ಗ್ರಂಥಗಳ ಮಾರಾಟಗಾರರು,
ಉಮಾ ಟಾಕೀಸ್ ಹತ್ತಿರ, ಚಾಮರಾಜಪೇಟೆ,
ಬೆಂಗಳೂರು—೫೬೦ ೦೧೮.

೩) **ಅಧ್ಯಾತ್ಮಪ್ರಕಾಶ ಕಾರ್ಯಾಲಯ,**
(ಬೆಂಗಳೂರು ಶಾಖೆ)
೬೮, ೨ನೇ ಬ್ಲಾಕ್,
ಪೋಸ್ಟ್ : ತ್ಯಾಗರಾಜನಗರ,
ಬೆಂಗಳೂರು—೫೬೦ ೦೨೮.

೪) **ಅಧ್ಯಾತ್ಮಪ್ರಕಾಶ ಕಾರ್ಯಾಲಯ,**
ಪೋಸ್ಟ್ : ಹೊಳೆನರಸೀಪುರ—೫೭೩ ೨೧೧
(ಜಿಲ್ಲಾ : ಹಾಸನ)

# ಉಪಕಾರಸ್ಮರಣೆ

ಈ ಪುಟ್ಟ ಹಸ್ತಲಿಖಿತ ಕನ್ನಡ ಪುಸ್ತಕವನ್ನು ಆಮೂಲಾಗ್ರವಾಗಿ ಓದಿ ಶೋಧಿಸಿದ ಶ್ರೀ ಶ್ರೀ ಮೂರ್ತಿಗಳಿಗೂ, ಹಸ್ತಲಿಖಿತಸಂಸ್ಕೃತ ಪುಸ್ತಕವನ್ನೂ ಹಸ್ತಲಿಖಿತ ಕನ್ನಡ ಪುಸ್ತಕವನ್ನೂ ಆಮೂಲಾಗ್ರವಾಗಿ ಓದಿ ಶೋಧಿಸಿ ಪ್ರೂಫನ್ನೂ ನೋಡಿ ತಿದ್ದಿದ "ಅಧ್ಯಾತ್ಮವಿದ್ಯಾಪ್ರವೀಣ" ರಾದ ಶ್ರೀ ಕೆ. ಜಿ. ಸುಬ್ಬರಾಯಶರ್ಮರಿಗೂ, ವೇ|| ಬ್ರ|| ಶ್ರೀ|| ಮುದುಗೊಂಡ ವೆಂಕಟರಾಮಶಾಸ್ತ್ರಿಗಳ ಆಕ್ಷೇಪಗಳನ್ನೂ ಅದಕ್ಕೆ ಶ್ರೀ ಶ್ರೀಗಳ ಉತ್ತರವನ್ನೂ ನೋಡಿ ತಿದ್ದಿದ ಅಧ್ಯಾತ್ಮವಿದ್ಯಾಪ್ರವೀಣ ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹ ಮೂರ್ತಿಗಳಿಗೂ, ಕನ್ನಡ ಗ್ರಂಥವನ್ನು ಓದಿಕೊಟ್ಟ ತಿಪಟೂರು ಶ್ರೀ ಬಾಲಕೃಷ್ಣ ರಾಯರಿಗೂ ಸರ್ವಜ್ಞನೂ ಸರ್ವಶಕ್ತನೂ ಆದ ನಾರಾಯಣನು ಶ್ರೇಯಸ್ಸನ್ನು ಉಂಟುಮಾಡಲೆಂದು ನಾರಾಯಣನನ್ನು ಸ್ಮರಿಸುತ್ತೇನೆ.

—ಲೇಖಕ

**ಶ್ರೀ ಜ್ಞಾನಾನಂದೇಂದ್ರಸರಸ್ವತೀಸ್ವಾಮೀಜಿ**
c/o
ಅಧ್ಯಾತ್ಮಪ್ರಕಾಶ ಕಾರ್ಯಾಲಯ
ಬೆಂಗಳೂರು–೫೬೦೦೨೮

೧೪–೯–೧೯೮೧

ಕ್ರಯ : ೫-೦೦ ರೂಪಾಯಿಗಳು

ಕನ್ನಡ ಮತ್ತು ಸಂಸ್ಕೃತ ಶಂಕರ ಸಿದ್ಧಾಂತವನ್ನು ಸಕಾಲದಲ್ಲಿ ಚೆನ್ನಾಗಿ ಮುದ್ರಿಸಿಕೊಟ್ಟ ಶ್ರೀ ಲಕ್ಷ್ಮೀ ಪ್ರಿಂಟಿಂಗ್ ವರ್ಕ್ಸ್ ಮಾಲೀಕರಾದ ಶ್ರೀ ಶೇಷಾದ್ರಿಯವರಿಗೂ ಮತ್ತೂ ಸುಧಾ ಮುದ್ರಣ ಮಂದಿರದ ಶ್ರೀ ಧನಂಜಯ ವಾಲ್ ಖೇಡ್ ಕರ್ ರವರಿಗೂ ಅಧಿಕವಾದ ಶ್ರೇಯಸ್ಸನ್ನುಂಟುಮಾಡಲೆಂದು ನಾರಾಯಣನನ್ನು ಸ್ಮರಿಸುತ್ತೇನೆ.

**—ಶ್ರೀ ಜ್ಞಾನಾನಂದೇಂದ್ರಸರಸ್ವತೀಸ್ವಾಮೀಜಿ**

ಈ ಪುಸ್ತಕದ ಹಕ್ಕು ಶ್ರೀಗಳವರ ಪೂರ್ವಾಶ್ರಮದ ಮಕ್ಕಳಾದ
ಶ್ರೀ ವೈ. ವಿ. ಶಂಕರನಾರಾಯಣರದ್ದಾಗಿದೆ.

ಪ್ರಥಮ ಮುದ್ರಣ : ೧೯೮೧
೧,೦೦೦ ಪ್ರತಿಗಳು

ಮುದ್ರಣಕಾರರು :
(ಕನ್ನಡದ್ದು)
ಶ್ರೀ ಶೇಷಾದ್ರಿಯವರು,
ಶ್ರೀ ಲಕ್ಷ್ಮೀ ಪ್ರಿಂಟಿಂಗ್ ವರ್ಕ್ಸ್, ಬೆಂಗಳೂರು-೫೬೦ ೦೦೪

(ಸಂಸ್ಕೃತದ್ದು)
ಶ್ರೀ ಧನಂಜಯ ವಾರ್ಖೇಡ್ಕರ್,
ಸುಧಾ ಮುದ್ರಣ ಮಂದಿರಮ್, ಬೆಂಗಳೂರು-೫೬೦ ೦೦೪

ಈ ಪುಸ್ತಕವನ್ನು ಬರೆದವರು :
**ಶ್ರೀ ಶ್ರೀ ಜ್ಞಾನಾನಂದೇಂದ್ರಸರಸ್ವತೀಸ್ವಾಮೀಜಿಯವರು**

# ಶ್ರೀ ಶಾಂಕರಸಿದ್ಧಾನ್ತಃ

**ಶಂಕರಂ ಶಂಕರಾಚಾರ್ಯಂ ಕೇಶವಂ ಬಾದರಾಯಣಮ್ ।**
**ಸೂತ್ರಭಾಷ್ಯಕೃತೌ ವಂದೇ ಭಗವನ್ತೌ ಪುನಃ ಪುನಃ ॥**

**ಛಾಂ. ೬-೨-೧ ಸದೇವ ಸೌಮ್ಯ ಇದಮಗ್ರ ಆಸೀತ್ ॥**
**ಐತ. ೧-೧-೧ ಆತ್ಮಾ ವಾ ಇದಮೇಕ ಏವಾಗ್ರ ಆಸೀತ್ ॥**

ಇವೇ ಮುಂತಾದ ಶ್ರುತಿಗಳು ಸೃಷ್ಟಿಗಿಂತ ಪೂರ್ವದಲ್ಲಿ ಆತ್ಮನೊಬ್ಬನೇ ಇದ್ದನು ಎಂದು ಹೇಳುತ್ತಿವೆ. ಸೃಷ್ಟಿಗಿಂತ ಪೂರ್ವದಲ್ಲಿ ಆತ್ಮನು ಒಬ್ಬನೇ ಇದ್ದರೂ ಸೃಷ್ಟಿಯಾದ ಮೇಲೆ ಆತ್ಮ ಮತ್ತು ಸೃಷ್ಟವಾದ ಪ್ರಪಂಚ ಎರಡೂ ಇವೆ, ಎಂದು ಹೇಳಬಹುದಲ್ಲ? ಎಂದರೆ ಹೇಳಲಾಗುವುದಿಲ್ಲ; ಏಕೆಂದರೆ, ಸೃಷ್ಟಿಗಿಂತ ಮೊದಲು ಇಲ್ಲದ್ದು ಈಗಲೂ ಇರುವದಿಲ್ಲ ಗೀ. 2-16 **ನಾಸತೋ ವಿದ್ಯತೇ ಭಾವಃ** ಇಲ್ಲದ್ದು ಇರುವದಾಗುವದಿಲ್ಲ ಎಂದು ಹೇಳಿರುತ್ತದೆ. (1)

ಪ್ರಪಂಚವು ಈಗ ಪ್ರತ್ಯಕ್ಷವಾಗಿದೆ. ಪ್ರತ್ಯಕ್ಷಪ್ರಮಾಣದಿಂದ ಸಿದ್ಧವಾದದ್ದನ್ನು ಇಲ್ಲ ಎಂದು ಹೇಳಬಹುದೆ? ಪ್ರತ್ಯಕ್ಷಕ್ಕೆ ವಿರೋಧವಿಲ್ಲದಂತೆ ಶಬ್ದಕ್ಕೆ ಅರ್ಥವನ್ನು ಮಾಡಬೇಕಲ್ಲವೆ? ಎಂದು ಆಕ್ಷೇಪಿಸಿದರೆ ಅದಕ್ಕೆ ಉತ್ತರವಿದು: ಇಂದ್ರಿಯಗಳು ಯಾವದರಿಂದ ಹುಟ್ಟಿದವುಗಳು? ನಾವು ತಿಂದ ಅನ್ನದಿಂದ ಹುಟ್ಟಿದವುಗಳು. ಅನ್ನ=ಅಕ್ಕಿ, ಗೋಧಿ ಮೊದಲಾದವುಗಳಿಂದ ಆದದ್ದು. ಅಕ್ಕಿ, ಗೋಧಿ ಮೊದಲಾದವು ಭೌತಿಕಗಳು. ಭೌತಿಕಗಳು ಪಂಚಭೂತಗಳಿಂದ ಹುಟ್ಟಿದವುಗಳು. ಪಂಚಭೂತಗಳೇ ಪ್ರಪಂಚ. ಆದುದರಿಂದ ಇಂದ್ರಿಯಗಳು ಪರಂಪರೆಯಿಂದ ಪ್ರಪಂಚದಿಂದ ಹುಟ್ಟಿದವುಗಳೆಂದಾಯಿತು. ಪ್ರಪಂಚದಿಂದ ಹುಟ್ಟಿದ ಇಂದ್ರಿಯಗಳಿಂದ ಪ್ರಪಂಚವನ್ನು ನೋಡಿದರೆ ಪ್ರಪಂಚವು ಸತ್ಯ

---

(1) ಗೀತಾ 2-1 ನಾಸತೋ ವಿದ್ಯತೇ ಭಾವಃ ನಾಭಾವೋ ವಿದ್ಯತೇ ಸತಃ ।
ಉಭಯೋರಪಿ ದೃಷ್ಟೋಽನ್ತಸ್ತ್ವನಯೋಸ್ತತ್ತ್ವದರ್ಶಿಭಿಃ ॥

ರಾದದ್ದೆಂದೇ ಅವು ಹೇಳಬೇಕು. ಇಲ್ಲವೆಂದು ಹೇಳಿದರೆ ತಮ್ಮ ತಾಯಿತಂದೆ ಗಳೇ ಇಲ್ಲವೆಂದು ಹೇಳಿದಂತಾಗುವದಿಲ್ಲವೆ ? "ನನ್ನ ತಾಯಿ ಬಂಜೆ" ಎಂದು ಹೇಳುವ ಮಾತಿಗೆ ಸಮಾನವಾಗುವದಿಲ್ಲವೆ ? ಆದುದರಿಂದ ಇಂದ್ರಿಯಗಳು ತಮ್ಮ ಉತ್ಪತ್ತಿಗೆ ಕಾರಣವಾದ ಪ್ರಪಂಚವನ್ನು ಇಲ್ಲವೆಂದು ಹೇಳಲಾರವು. ಛಾಂದೋಗ್ಯೋಪನಿಷತ್ತಿನಲ್ಲಿ **ಅನ್ನಮ್ ಅಶಿತಂ ತ್ರೇಧಾ ವಿಭಜ್ಯತೇ ಯುತ್ಸಾರಭೂತಂ ತನ್ಮನಃ** ಎಂದು ನಾವು ತಿಂದ ಅನ್ನದ ಸಾರವೇ ಮನಸ್ಸು ಎಂದು ಹೇಳಿರುತ್ತದೆ. ಆದುದರಿಂದ ಮನಸ್ಸು ಮತ್ತು ಇಂದ್ರಿಯಗಳು ಪ್ರಪಂಚದ ಪಕ್ಷಕ್ಕೇ ಸೇರಿದವುಗಳು. ಅವುಗಳನ್ನು ಪ್ರಪಂಚದ ಪಕ್ಷಕ್ಕೇ ಸೇರಿಸಿ ಯಾರು ತಾವು ಶುದ್ಧಾತ್ಮರಾಗಿ ನಿಂತು ನೋಡುತ್ತಾರೆಯೋ ಅವರಿಗೆ ಪ್ರಪಂಚವು ಕಾಣಿಸುವದಿಲ್ಲವೆಂದು ಅವರು ಹೇಳುತ್ತಾರೆ. ಹಾಗೆ ತಾವೇ ತಾವಾಗಿ ನಿಂತು ನೋಡಿದ ಶಂಕರಾಚಾರ್ಯರು ಪ್ರಪಂಚ ಕಾಣುವದಿಲ್ಲ--ಬ್ರಹ್ಮವೇ ಕಾಣುತ್ತದೆ—ಎಂದು ಹೇಳಿರುತ್ತಾರೆ.

ಪ್ರಪಂಚವನ್ನು ನೋಡುವವರು ಯಾರು ? ದೇಹೇಂದ್ರಿಯಾದಿಗಳಲ್ಲಿ ನಾವು ನಮ್ಮವು ಎಂಬ ಭ್ರಾಂತಿಯನ್ನು ಹೊಂದಿದವರು. ಶುದ್ಧವಾದ ಆತ್ಮನು ನಿರವಯವನು ನಿರ್ವಿಕಾರನು. ಅವನು ನೋಡುವ ಹಾಗಿಲ್ಲ. ಕಣ್ಣು ಜಡವಾದದ್ದು. ಅದು ನೋಡುವ ಹಾಗಿಲ್ಲ. ತಾನಲ್ಲದ ಕಣ್ಣನ್ನು ತಾನು ಎಂಬ ತಪ್ಪು ತಿಳಿವಳಿಕೆಯುಳ್ಳವನೇ ನಾನು ನೋಡುತ್ತೇನೆ. ಎಂದು ಹೇಳುವವನು. ಇವನು ಭ್ರಾಂತನಲ್ಲವೆ ? ಭ್ರಾಂತನು ನೋಡಿದ ನೋಟವು ಸರಿಯಾದದ್ದೆ ? ಸರಿಯಾದದ್ದಲ್ಲ. ಯಾರು ದೇಹೇಂದ್ರಿಯಾದಿಗಳಲ್ಲಿ ನಾನು, ನನ್ನವು ಎಂಬ ಭ್ರಾಂತಿಯನ್ನು ಜ್ಞಾನದಿಂದ ಕಳೆದುಕೊಂಡು ತಮ್ಮ ಸ್ವರೂಪದಲ್ಲಿಯೇ ನಿಂತು ನೋಡುತ್ತಾರೆಯೋ ಅವರು ಅಭ್ರಾಂತರು. ಅವರು ಪ್ರಪಂಚವು ಕಾಣುವದಿಲ್ಲ–ಎಂದು ಹೇಳುತ್ತಾರೆ. ಇವರ ನೋಟವು ನಿರ್ದುಷ್ಟವಾದದ್ದು. ಆದುದರಿಂದ ಇವರು ಹೇಳುವದೇ ಯುಕ್ತವಾದದ್ದಾಗಿರುತ್ತದೆ. ಭಗವಂತನೂ

---

**ಸೂ. ಭಾ. ಅಧ್ಯಾಸಭಾಷ್ಯ : ದೇಹೇಂದ್ರಿಯಾದಿಷು ಅಹಂ ಮಮಾ-
ಭಿಮಾನರಹಿತಸ್ಯ ಪ್ರಮಾತೃತ್ವಾನುಪಪತ್ತೇಃ**

**ಅಸತಃ ಭಾವಃ ನ ವಿದ್ಯತೇ** ಎಂದು ಹೇಳಿರುತ್ತಾನೆ. ಆದುದರಿಂದ ಸೃಷ್ಟಿಗಿಂತ ಪೂರ್ವದಲ್ಲಿ ಇಲ್ಲದಿದ್ದ ಪ್ರಪಂಚವು ಈಗಲೂ ಇಲ್ಲ ಎಂಬುವುದೇ ಯುಕ್ತ ವಾದದ್ದು.

ನಾನು ದೇಹೀ ಶರೀರವುಳ್ಳವನು ಎಂಬುದು ಭ್ರಾಂತಿ ಹೌದೊ? ಅಲ್ಲವೊ? ಯಾರು ಬೇಕಾದರೂ ವಿಚಾರ ಮಾಡಿ ನೋಡಲಿ. ವಿಚಾರ ಮಾಡಿದರೆ ಅವರಿಗೆ ಇದು ಭ್ರಾಂತಿ ಎಂದು ಗೊತ್ತಾಗುತ್ತದೆ.[1]

ನಾನು ಎಂಬ ಪ್ರತ್ಯಯಕ್ಕೆ ಗೋಚರನು ಆತ್ಮನು, ನೀನು ಅಥವಾ ಇದು ಎಂಬ ಪ್ರತ್ಯಯಕ್ಕೆ ಗೋಚರವಾದದ್ದು ದೇಹಾದಿಪ್ರಪಂಚ. ನಾನು ವಿಷಯೀ, ದೇಹಾದಿ ಪ್ರಪಂಚವು ವಿಷಯ. ನಾನು ಪ್ರಕಾಶ ಸ್ವಭಾವದವನು ದೇಹಾದಿ ಪ್ರಪಂಚವು ತಮಸ್ಸ್ವಭಾವವುಳ್ಳದ್ದು. ನಾನು ಶುದ್ಧ ಚೇತನನು ದೇಹಾದಿ ಪ್ರಪಂಚವು ಜಡವಸ್ತುವು. ನಾನು ನಿರವಯನು ದೇಹಾದಿ ಪ್ರಪಂಚವು ಸಾವಯುವವಾದದ್ದು. ನಾನು ನಿತ್ಯನು. ದೇಹಾದಿ ಪ್ರಪಂಚವು ಅನಿತ್ಯವಾದದ್ದು. ಹೀಗೆ ಇವೆರಡೂ ಪರಸ್ಪರ ವಿರುದ್ಧ ಸ್ವಭಾವವುಳ್ಳವುಗಳು. ಇಂತಹವು ಒಂದು ಮತ್ತೊಂದು ಆಗುತ್ತದೆಯೆ? ಎಂದಿಗೂ ಆಗುವುದಿಲ್ಲ. ಮೋಟ ಮರವು ಕಳ್ಳನಾಗುತ್ತದೆಯೆ? ಆಗುವದಿಲ್ಲ. ಹೀಗಿದ್ದರೂ ಆತ್ಮನನ್ನು ದೇಹವನ್ನಾಗಿಯೂ ದೇಹವನ್ನು ಆತ್ಮನನ್ನಾಗಿಯೂ ಮೋಟು ಮರವನ್ನು ಕಳ್ಳನೆಂದು ತಿಳಿಯುವಂತೆ ಎಲ್ಲರೂ ತಿಳಿದಿದ್ದಾರೆ. ಒಂದನ್ನು ಮತ್ತೊಂದನ್ನಾಗಿ ತಿಳಿಯುವದು ಭ್ರಾಂತಿಯಲ್ಲವೆ? ನಾನು ಇಂತಹ ದಿವಸ ಹುಟ್ಟಿದೆನು ಎಂದು ದೇಹವು ಹುಟ್ಟಿದ್ದನ್ನು ನಾನು ಹುಟ್ಟಿದೆನು ಎಂದು ಹೇಳುವದು ಭ್ರಾಂತಿಯಲ್ಲವೆ? ದೇಹಾದಿಗಳಲ್ಲಿ ನಾನು ಎಂಬ ಭ್ರಾಂತಿಯುಳ್ಳವರೇ ಪ್ರಪಂಚವನ್ನು ನೋಡುವವರು. ಇವರ ನೋಟಕ್ಕೆ ಏನು ಬೆಲೆ? ಬೆಲೆಯಿಲ್ಲ.[2]

---

(1) ಸೂ. ಭಾ. ಅಧ್ಯಾಸ ಭಾಷ್ಯ: ನಹಿ ಇಂದ್ರಿಯಾಣ್ಯನುಪಾದಾಯ ಪ್ರತ್ಯಕ್ಷಾದಿವ್ಯವಹಾರಸ್ಸಂಭವತಿ ||

(2) ಸೂ. ಭಾ. ಅಧ್ಯಾಸ ಭಾಷ್ಯ: ನಹಿ ಅನಧ್ಯಸ್ತಾತ್ಮಭಾವೇನ ದೇಹೇನ ಕಶ್ಚಿದ್ವ್ಯಾಪ್ರಿಯತೇ |

ದೇಹೇಂದ್ರಿಯಾದಿಗಳಲ್ಲಿ ನಾನು ನನ್ನವು ಎಂಬ ಭ್ರಾಂತಿಯನ್ನು ವಿಚಾರ–ಜನ್ಯಜ್ಞಾನದಿಂದ ಕಳೆದುಕೊಂಡವರು ಪ್ರಪಂಚವು ತೋರುವದಿಲ್ಲ ಎಂದು ಹೇಳುತ್ತಾರೆ. ಇವರು ಅಭ್ರಾಂತರಾದುದರಿಂದ ಇವರ ನೋಟವೇ ಸರಿಯಾದದ್ದು. ಶಂಕರಾಚಾರ್ಯರು ದೇಹೇಂದ್ರಿಯಾದಿಗಳಲ್ಲಿ ನಾನು ನನ್ನವು ಎಂಬ ಭ್ರಾಂತಿಯನ್ನು ಜ್ಞಾನದಿಂದ ಕಳೆದುಕೊಂಡು ನೋಡುತ್ತೇನೆ. ಪ್ರಪಂಚವು ಕಾಣಿಸುವುದೇ ಇಲ್ಲ, ಆತ್ಮನೇ ಎಲ್ಲೆಲ್ಲಿಯೂ ಕಾಣಿಸುತ್ತಾನೆ—ಎಂದು ಹೇಳಿದ್ದಾರೆ. ಇವರು ಅಭ್ರಾಂತರಾದುದರಿಂದ ಇವರ ನೋಟವೇ ಸರಿಯಾದದ್ದು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ದೇಹಾದಿಗಳಲ್ಲಿ ನಾನು ಎಂಬ ಭ್ರಾಂತಿಯನ್ನು ಹೊಂದಿದವರು ದರ್ಶನಕಾರರಾಗಲೀ ಸಾಮಾನ್ಯರಾಗಲೀ ಯಾರೇ ಆಗಲಿ ಅವರ ನೋಟವು ಭ್ರಾಂತರಾಗಿ ನೋಡುವುದರಿಂದ ಸರಿಯಾದದ್ದಲ್ಲ. ಗೀತಾ ಭಾಷ್ಯ 13–26 ರಲ್ಲಿ ಕ್ಷೇತ್ರಂಚ ಎಂದರೆ ಪ್ರಪಂಚವು ಮಾಯೆಯಿಂದ ಮಾಡಿದ ಆನೆಯಂತೆಯೂ, ಸ್ವಪ್ನದಲ್ಲಿ ನೋಡಿದ ವಸ್ತುವಿನಂತೆಯೂ, ಗಂಧರ್ವನಗರದಂತೆಯೂ ಇಲ್ಲದ್ದು ಇದ್ದಂತೆ ಕಾಣುತ್ತದೆ. ಎಂದು ಭಗವಂತನು ಹೇಳಿದ್ದಾನೆ.[1] ಪ್ರಪಂಚವು ಪ್ರಮಾಣಸಿದ್ಧವಾದದ್ದು ಆದುದರಿಂದ ಸತ್ಯವಾಗಿ ಇರತಕ್ಕದ್ದು ಎಂದು ಹೇಳುವದು ಭಗವಂತನ ವಾಕ್ಯಕ್ಕೆ ವಿರುದ್ಧವಾದದ್ದು ಮತ್ತು ಜ್ಞಾನಿಗಳ ಅನುಭವಕ್ಕೆ ವಿರುದ್ಧವಾದದ್ದು.

---

ಗಿ. ಭಾ. 13–26 ಕ್ಷೇತ್ರಂಚ ಮಾಯಾನಿರ್ಮಿತಹಸ್ತಿವತ್, ಸ್ವಪ್ನದೃಷ್ಟ-ವಸ್ತುವತ್, ಗಂಧರ್ವನಗರವತ್ ಅಸದೇವ ಸದಿವ ಅವಭಾಸತೇ ||

# ಆತ್ಮನ ಲಕ್ಷಣ

**ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ |**
**ಯಚ್ಚಾಸ್ಯ ಸಂತತೋ ಭಾವಃ ತಸ್ಮಾದಾತ್ಮೇತಿ ಕಥ್ಯತೇ ||**

**ಅರ್ಥ** = ಯಚ್ಚಾಪ್ನೋತಿ = ಯಾವುದು ಸರ್ವವನ್ನೂ ವ್ಯಾಪಿಸಿದೆಯೋ, ಯದಾದತ್ತೇ = ಸ್ಥಿತಿ ಕಾಲದಲ್ಲಿ ಯಾವದರಲ್ಲಿ ಎಲ್ಲವೂ ಇವೆಯೋ, ಯಚ್ಚಾತ್ತಿ ವಿಷಯಾನಿಹ = ಯಾವದರಲ್ಲಿಯೇ ಎಲ್ಲವೂ ಲಯವಾಗುತ್ತವೆಯೋ ಯಚ್ಚಾಸ್ಯ ಸಂತೋಭಾವಃ ಯಾವದು ಎಲ್ಲ ಕಾಲದಲ್ಲಿಯೂ ಎಲ್ಲ ದೇಶದಲ್ಲಿಯೂ "ಇಲ್ಲ" ಎಂದು ಅನ್ನಿಸಿಕೊಳ್ಳದೇ ಇದೆಯೋ **ಅದೇ** ಆತ್ಮಾ, ಬ್ರಹ್ಮದ ಲಕ್ಷಣವೂ ಇದೆ ಆಗಿರುವದರಿಂದ ಭಾಷ್ಯಾಕಾರರು **ಆತ್ಮಾಚ ಬ್ರಹ್ಮ** ಎಂದು ಹೇಳಿದ್ದಾರೆ.[1]

ಇಲ್ಲಿ ಒಂದು ವಿಚಾರವನ್ನು ಮಾಡತಕ್ಕದ್ದಿದೆ. ಜೀವನು ಬೇರೆ ಬ್ರಹ್ಮವು ಬೇರೆ ಪ್ರಪಂಚವು ಬೇರೆ ಎಂದು ಹೇಳಿದರೆ ಮೂರೂ ವಸ್ತು ಪರಿಚ್ಛಿನ್ನಗಳಾಗುತ್ತವೆ. ಜೀವ ಎಂಬ ಸ್ವರೂಪದಲ್ಲಿ ಬ್ರಹ್ಮ ಇಲ್ಲವೆಂದರೆ ಬ್ರಹ್ಮವು ಸರ್ವ ವ್ಯಾಪಕವಾಗುವದಿಲ್ಲ. ಜೀವನ ಒಳಗೂ ಹೊರಗೂ ವ್ಯಾಪಿಸಬಹುದು. ಜೀವನ ಸ್ವರೂಪದಲ್ಲಿ ವ್ಯಾಪ್ತಿ ಇಲ್ಲವೆಂದಾಗುತ್ತದೆ. ಜೀವ ಎಂಬ ಸ್ವರೂಪವೂ ಬ್ರಹ್ಮ ಎಂದಾದರೆ ಮಾತ್ರ ಬ್ರಹ್ಮಕ್ಕೆ ವ್ಯಾಪಕತ್ವ ಬರುತ್ತದೆ. ಆಗ ಜೀವ ಎಂಬುವನು ಬ್ರಹ್ಮಕ್ಕಿಂತ ಬೇರೆಯಾಗಿಲ್ಲವೆಂದಾಗುತ್ತದೆ ಆದರೆ ತಿಳಿದವರೆನ್ನಿಸಿಕೊಂಡವರೂ ಜೀವನೂ ಪರಮಾತ್ಮನೂ ಭಿನ್ನರು ಎಂದೂ ಹೇಳಿ ಬ್ರಹ್ಮಕ್ಕೆ ವ್ಯಾಪಕತ್ವವನ್ನೂ ಹೇಳುತ್ತಾರೆ. ಇದು ಹೇಗೆ ಸಂಗತವಾಗುತ್ತದೆ? ಎಂಬುದನ್ನು ವಿಚಾರಪರರೇ ವಿಮರ್ಶಿಸಲಿ. ಎರಡು ಭಿನ್ನವಾಗಿದ್ದರೆ. ಇದು ಅದಲ್ಲ. ಅದು ಇದಲ್ಲ = ಎಂಬ ನ್ಯಾಯದಿಂದ

---

(1) ಸೂ. ಭಾ 1-1-1 ಆತ್ಮಾ ಚ ಬ್ರಹ್ಮ.

ಎರಡಕ್ಕೂ ಸರ್ವವ್ಯಾಪಕತ್ವ ಬರುವದಿಲ್ಲವೆಂಬುದು ನಿಶ್ಚಿತವಾದನಿರ್ಣಯ.

ಇಂತಹ ಸರ್ವ ವ್ಯಾಪಕನಾದ, ಆತ್ಮನನ್ನು ಕಾಣಬೇಕಾದರೆ ದೇಹೇಂದ್ರಿಯಾದಿಗಳಲ್ಲಿ ನಾನು ನನ್ನವು ಎಂಬ ಭ್ರಾಂತಿಯನ್ನು ಕಳೆದುಕೊಂಡು ನಿಜವಾದ ಆತ್ಮಸ್ವರೂಪದಲ್ಲಿಯೇ ನಿಂತವರಾಗಬೇಕು.[1] ದೇಹೇಂದ್ರಿಯಾದಿಗಳಲ್ಲಿ ನಾನು ನನ್ನವು ಎಂಬ ಭ್ರಾಂತಿಯುಳ್ಳವರು ಎಷ್ಟು ವಿಚಾರ ಮಾಡಿದರೂ ನೋಡಲಾರರು ದೇಹೇಂದ್ರಿಯಗಳಲ್ಲಿ ನಾನು ನಮ್ಮವು ಎಂಬ ಭ್ರಾಂತಿಯುಳ್ಳವರಿಗೆ ಪರಮಾರ್ಥವಾಗಿರುವ ಆತ್ಮನು ಕಾಣಿಸುವದೇ ಇಲ್ಲ. ಪರಮಾರ್ಥವಾಗಿಲ್ಲದ, ಇದ್ದಂತೆ ತೋರುವ ದೇಹೇಂದ್ರಿಯಾದಿ ಪ್ರಪಂಚವೇ ಸತ್ಯವಾದದ್ದಾಗಿ ಕಾಣುತ್ತದೆ. ಆದರೆ ಅವರು ಕಂಡಂತೆ ಪ್ರಪಂಚವು ನಿಜವಾಗಿ ಸತ್ಯವಾಗಿರುವದಿಲ್ಲ.[2] ಮಾಂ. ಕಾ. 2–31 ರಲ್ಲಿ ಸ್ವಪ್ನವು ಹೇಗೆ ಇಲ್ಲದ್ದು ಇದ್ದಂತೆ ಕಾಣುತ್ತದೆಯೋ, ಮಾಯೆಯು ಇಲ್ಲದ್ದು ಹೇಗೆ ಇದ್ದಂತೆ ಕಾಣುತ್ತದೆಯೋ ಹಾಗೆ ಈ ಪ್ರಪಂಚವು ಇಲ್ಲದ್ದು ಇದ್ದಂತೆ ಕಾಣುತ್ತದೆ ಎಂದು ಹೇಳಿರುತ್ತದೆ.[3]

ಸೂ.ಭಾ. 3,2 22 ರಲ್ಲಿ ಮೂರ್ತಾಮೂರ್ತ ದ್ರವ್ಯಗಳು ಅಂದರೆ ಇಡೀ ಜಗತ್ತು ಅವಿದ್ಯೆಯಿಂದ ಕಲ್ಪಿತವಾಗಿರುವದರಿಂದ ನಿಜವಾಗಿ ಇರುವುದಿಲ್ಲ. ಆದುದರಿಂದ "ನೇತಿ" "ನೇತಿ" ಎಂದು ಮೂರ್ತಾಮೂರ್ತ ದ್ರವ್ಯಗಳನ್ನು ಇಲ್ಲದವುಗಳನ್ನಾಗಿ ಶ್ರುತಿ ಹೇಳಿರುತ್ತದೆ.[3]

---

(1) ಛಾಂ. ಭಾ. 6–8–3 ಆತ್ಮಶಬ್ದಸ್ಯ ನಿರುಪಪದಸ್ಯ ಪ್ರತ್ಯಗಾತ್ಮನಿ ಗವಾದಿಶಬ್ದವತ್ ರೂಢತ್ವಾತ್ !

(2) ಮಾಂ. ಕಾ. 2–31 ಸ್ವಪ್ನಮಾಯೇ ಯಥಾದೃಷ್ಟೇ ಗಂಧರ್ವನಗರಂ ಯಥಾ । ತಥಾ ವಿಶ್ವಮಿದಂ ದೃಷ್ಟಂ ವೇದಾಂತೇಷು ವಿಚಕ್ಷಣೈಃ ॥

(3) ಸೂ. ಭಾ. 3–2–22 ತತ್ರ ಕಲ್ಪಿತರೂಪ ಪ್ರತ್ಯಾಖ್ಯಾನೇನ ಬ್ರಹ್ಮಣಃ ಸ್ವರೂಪಾವೇದನಮಿತಿ ನಿರ್ಣೀಯತೇ ॥

ಮತ್ತೂ ಸಾರ್ವತ್ರಿಕಾನುಭವದಿಂದಲೂ ಪ್ರಪಂಚವು ಪರಮಾರ್ಥವಾಗಿ ಇರುವದಲ್ಲ. ಇದ್ದಂತೆ ತೋರುತ್ತದೆ ಎಂಬುದು ಗೊತ್ತಾಗುತ್ತದೆ. ಅದು ಹೇಗೆಂದರೆ ದೇಹೇಂದ್ರಿಯಾದಿಗಳಲ್ಲಿ ನಾನು ನನ್ನವು ಎಂಬುದು **ಭ್ರಾಂತಿ.** ಇದಕ್ಕೆ ಅವಿದ್ಯೆಯೆಂದು ಹೆಸರು. ಈ ಅವಿದ್ಯೆಯು ಇರುವ ಜಾಗ್ರತ್ಸ್ವಪ್ನ ಗಳಲ್ಲಿಯೇ ಪ್ರಪಂಚವು ಕಾಣಿಸುತ್ತದೆ. ಅವಿದ್ಯೆ ಇಲ್ಲದ ಸುಷುಪ್ತಿಯಲ್ಲಿ ಪ್ರಪಂಚ ಕಾಣಿಸುವುದಿಲ್ಲ. **ಯತ್ಸತ್ತ್ವೇ ಯತ್ಸತ್ತ್ವಂ ಯದಸತ್ತ್ವೇ ಯದಸತ್ತ್ವಂ ತತ್ತತ್ಕಾರ್ಯಂ**—ಎಂಬ ನ್ಯಾಯದಿಂದ ಪ್ರಪಂಚವು ಅವಿದ್ಯಾ ಕಾರ್ಯವು ಪರಮಾರ್ಥವಾಗಿ ಇರುವದಲ್ಲ ಎಂಬುದು ಗೊತ್ತಾಗುತ್ತದೆ. ಭಾಷ್ಯಕಾರರು ಗೀತಾಭಾಷ್ಯ 13–26 ರಲ್ಲಿ ಹೀಗೆ ಹೇಳಿದ್ದಾರೆ.

| | |
|---|---|
| ಕ್ಷೇತ್ರ ವಿಷಯ | ಕ್ಷೇತ್ರಜ್ಞ ವಿಷಯೀ |
| ಕ್ಷೇತ್ರದ ಸ್ವಭಾವ ಜಡಸ್ವಭಾವ | ಕ್ಷೇತ್ರಜ್ಞ ಸ್ವಭಾವ ಚೈತನ್ಯಸ್ವಭಾವ |

ಒಂದನ್ನು ಮತ್ತೊಂದನ್ನಾಗಿಯೂ ತಿಳಿಯುವ ಒಂದರ ಧರ್ಮವನ್ನು ಮತ್ತೊಂದರ ಧರ್ಮವನ್ನಾಗಿಯೂ ತಿಳಿಯುವ ತಪ್ಪು ತಿಳುವಳಿಕೆಯೇ ಗೀತೆಯ 13–26ನೆಯ ಶ್ಲೋಕದಲ್ಲಿ ಹೇಳಿರುವ ಸಂಯೋಗ ಎಂಬ ಶಬ್ದದ ಅರ್ಥ. ಇದು ಕ್ಷೇತ್ರ ಕ್ಷೇತ್ರಜ್ಞರ ಸ್ವರೂಪವನ್ನು ವಿವೇಕ ಮಾಡದೇ ಇದ್ದದ್ದ ರಿಂದ ಉಂಟಾದದ್ದು ಎಂದೂ ಇದಕ್ಕೆ ಅಧ್ಯಾಸವೆಂದು ಹೆಸರು. ಎಂದೂ ಈ ಅಧ್ಯಾಸವೇ ಪ್ರಪಂಚಕ್ಕೆ ಕಾರಣ ಎಂದೂ ಹೇಳಿರುತ್ತದೆ.[1]

---

(1) ಗೀ.ಭಾ 13–26 ಕ್ಷೇತ್ರಕ್ಷೇತ್ರಜ್ಞಯೋಃ ವಿಷಯವಿಷಯಿಣೋಃ ಭಿನ್ನ ಸ್ವಭಾವಯೋಃ ಇತರೇತರತದ್ಧರ್ಮಾಧ್ಯಾಸಲಕ್ಷಣಃ ಸಂಯೋಗಃ, ಕ್ಷೇತ್ರಕ್ಷೇತ್ರಜ್ಞಸ್ವರೂಪವಿವೇಕಾಭಾವನಿಬಂಧನಃ

ರಜ್ಜುಶುಕ್ತಿಕಾದೀನಾಂ ತದ್ವಿವೇಕಜ್ಞಾನಾಭಾವಾತ್ ಅಧ್ಯಾರೋಪಿತಸರ್ಪರಜತಾದಿಸಂಯೋಗವತ್, ಸೋಽಯಂ ಅಧ್ಯಾಸ-ಸ್ವರೂಪಃ ಮಿಥ್ಯಾಜ್ಞಾನಲಕ್ಷಣಃ

ಮಿಥ್ಯಾಜ್ಞಾನಕಾರ್ಯವು ಪರಮಾರ್ಥವಾಗಿರುವದಲ್ಲವೆಂಬುದು ಸರ್ವರಿಗೂ ತಿಳಿದ ವಿಷಯುವೇ ಆಗಿದೆ.

ಆತ್ಮನು ಮಾತ್ರ ಕಲ್ಪನೆಗೆ ಆಸ್ಪದನಾಗಿ ಅಕಲ್ಪಿತನಾಗಿರುವದರಿಂದ, ಪರಮಾರ್ಥವಾಗಿ ಇರತಕ್ಕವನೆಂದು ಗೊತ್ತಾಗುತ್ತದೆ. ಆತ್ಮನು ಇಲ್ಲವೆಂದು ಯಾರಿಂದಲೂ ಹೇಳುವದಕ್ಕಾಗುವದಿಲ್ಲ. ಏಕೆಂದರೆ ಆತ್ಮನು ಇಲ್ಲವೆಂದು ಹೇಳುವವನೇ ಆತ್ಮನಾಗಿರುವದರಿಂದ ತಾನು ಇಲ್ಲ ಎಂದು ಹೇಳುವದಕ್ಕಾಗುವದಿಲ್ಲವಾದುದರಿಂದ ಆತ್ಮನು ಸತ್ಯನು ಎಂಬುದು ಸಿದ್ಧವಾಗುತ್ತದೆ.

ಭಾಷ್ಯಕಾರರು ಅಧ್ಯಾಸವನ್ನು ಅನಾದಿಯಾದದ್ದೆಂದು ಹೇಳಿದ್ದರೂ ಅದಕ್ಕೆ ವಿರುದ್ಧವಾಗಿ ಪಂಚಪಾದಿಕಾಕಾರರೆಂಬ ವ್ಯಾಖ್ಯಾನಕಾರರು ಅಧ್ಯಾಸವನ್ನು ಕಾರ್ಯವನ್ನಾಗಿಯೂ ಇದಕ್ಕೆ ಉಪಾದಾನ ಕಾರಣವು ಮೂಲಾವಿದ್ಯೆಯು ಎಂದೂ ಭಾಷ್ಯಕಾರರೇ ಮೂಲವಿದ್ಯೆಯನ್ನು ಹೇಳಿರುವಂತೆ ಭಾಷ್ಯಕಾರರ ಒಂದು ಪದವನ್ನು ಮೂರು ಪದಗಳನ್ನಾಗಿ ಒಡೆದು ಈ ಅರ್ಥವನ್ನು ಭಾಷ್ಯದೊಳಕ್ಕೆ ತುಂಬಿದರು. ಅದು ಹೇಗೇಂದರೆ ಭಾಷ್ಯಕಾರರು ಮಿಥ್ಯಾಜ್ಞಾನನಿಮಿತ್ತಃ....ವ್ಯವಹಾರಃ = ಎಂದು ಬರೆದಿದ್ದಾರೆ. ಇವರು ಹೇಳಿರುವ ಮಿಥ್ಯಾಜ್ಞಾನನಿಮಿತ್ತಃ ಎಂಬ ಒಂದು ಪದವನ್ನು ಒಡೆದು ಮೂರು ಪದಗಳನ್ನಾಗಿ ಮಾಡಿದರು. ಮಿಥ್ಯಾ ಅಜ್ಞಾನ ನಿಮಿತ್ತಃ ಎಂದು ಮಾಡಿದರು.

ಮಿಥ್ಯಾ ಎಂದರೆ ಅನಿರ್ವಚನೀಯವಾದ ಎಂಬ ಹೊಸ ಅರ್ಥವನು ಕಲ್ಪಿಸಿದರು.

ಅಜ್ಞಾನ ಎಂದರೆ ಜಗತ್ತಿಗೆ ಉಪಾದಾನ ಕಾರಣವಾದ ವಸ್ತು = ಎಂದು ಅಸಂಭವವಾದ ಅರ್ಥವನ್ನು ಕಲ್ಪಿಸಿದರು.

ನಿಮಿತ್ತಃ—ಎಂದರೆ ಉಪಾದಾನ ಕಾರಣಂ ಎಂದು ಇಲ್ಲದ ಅರ್ಥವನ್ನು ಕಲ್ಪಿಸಿದರು.

ಒಟ್ಟು ಅರ್ಥವೇನೆಂದರೆ ಮೂಲಾವಿದ್ಯೆಯು ಜಗತ್ತಿಗೆ ಉಪಾದಾನ ಕಾರಣವಾದ ಅನಿರ್ವಚನೀಯವಸ್ತು—ಎಂದು ಅಸಂಭವವಾದ ಅರ್ಥವನ್ನು ಕಲ್ಪಿಸಿದರು. ವ್ಯಾಖ್ಯಾನಕಾರರು ಹೇಳಿರುವದನ್ನು ಅನುಸರಿಸುವದು ಸ್ವಭಾವವಾದ ಪಂಡಿತರ ಪದ್ಧತಿ ! ಆ ಪದ್ಧತಿಯಂತೆ 3, 4 ಶಾಸ್ತ್ರಗಳಲ್ಲಿ ನಿಷ್ಣಾತರಾದ ಪಂಡಿತರೂ ವ್ಯಾಖ್ಯಾನಕಾರರಾದ ಪಂಚಪಾದಿಕಾಕಾರರನ್ನೇ ಅನುಸರಿಸುತ್ತಾ ಬಂದರು. ಈಗಲೂ—ಭಾಷ್ಯದಲ್ಲಿ ಮೂಲಾವಿದ್ಯೆಯನ್ನು ಹೇಳಿಲ್ಲ ಎಂದೂ ಸೂಚಿಸಿಯೂ ಇಲ್ಲ ಎಂದೂ, ಒಪ್ಪಿದರೆ ದ್ವೈತವಾಗುತ್ತದೆ—ಎಂದೂ ಹೇಳಿದರೂ ವಿದ್ವಾಂಸರೂ ಮಠಾಧಿಪತಿಗಳೂ ಆ ಮೂಲಾವಿದ್ಯಾವಾದವನ್ನು ಬಿಡಲು ಸಿದ್ಧರಾಗಿರುವಂತೆ ಕಾಣುವದಿಲ್ಲ. ಅದನ್ನೇ ರಕ್ಷಿಸಲು ಪ್ರಯತ್ನಪಡುತ್ತಾರೆ ಪಂ|| ಪಾ|| ಪುಟ 20ರಲ್ಲಿ ಮೂಲಾವಿದ್ಯಾಲಕ್ಷಣವನ್ನು ಈ ರೀತಿಯಲ್ಲಿ ಹೇಳಿರುತ್ತದೆ.

ಶ್ರುತಿಸ್ಮೃತಿಪುರಾಣೇಷು ಯೇಯಂ ನಾಮರೂಪಬೀಜಂ, ಅವ್ಯಾಕೃತಂ, ಅವಿದ್ಯಾ, ಮಾಯಾ, ಪ್ರಕೃತಿಃ, ಅಗ್ರಹಣಂ, ಇತ್ಯಾದಿಶಬ್ದೈಃ ಪ್ರತಿಪಾದಿತಾ, ಸದಸದ್ಭಿನ್ನಾ, ಜ್ಞಾನಬಾಧ್ಯಾ, ಅನಾದ್ಯನಿರ್ವಚನೀಯವಸ್ತುಭೂತಾ, ಬ್ರಹ್ಮಾಶ್ರಯಾ, ಬ್ರಹ್ಮವಿಷಯಾ, ಅಧ್ಯಾಸಾದಿಸರ್ವಪ್ರಪಂಚಸ್ಯ ಉಪಾದಾನಕಾರಣೀಭೂತಾ, ಮಾಯಾ, ಅವಿದ್ಯೇತಿನಾಮ್ನಾ ವಿದಿತಾ, ಭಾವರೂಪಾ, ಮೂಲಾವಿದ್ಯಾ, ಎಂದು ಮುಂತಾಗಿ ವರ್ಣಿಸಿರುತ್ತಾರೆ.

ಸೃಷ್ಟಿಗೆ ಪೂರ್ವದಲ್ಲಿ ಆತ್ಮನೊಬ್ಬನೇ ಇದ್ದನು—ಎಂದು ಹೇಳುವ ಶ್ರುತಿಗಳಿಗೆ ಅನಾದ್ಯನಿರ್ವಚನೀಯವಸ್ತುಭೂತವಾದ ಮೂಲಾವಿದ್ಯೆಯೂ ಇತ್ತು ಎಂದು ಹೇಳಿದರೆ ವಿರೋಧವು ಬರುವದಿಲ್ಲವೆ ?

ದ್ವೈತವಾಗುವದಿಲ್ಲವೆ ?

ವಸ್ತುವು ಜ್ಞಾನದಿಂದ ಬಾಧ್ಯವಾಗುತ್ತದೆಯೆ ?

ಬಾಧ್ಯವಾಗದಿದ್ದರೆ ದ್ವೈತವೇ ಆಗುವದಿಲ್ಲವೆ ?

ಅದ್ವೈತಹಾನಿಯಾಗುವದಿಲ್ಲವೆ ?

ಇದೆಲ್ಲವನ್ನೂ ವಿಚಾರಪರರು ವಿಮರ್ಶಿಸಬೇಕೆಂದು ಹೇಳಬೇಕಾಗಿದೆಯೇ ? ಅನಾದ್ಯನಿರ್ವಚನೀಯವಸ್ತುಭೂತವಾದ ಮೂಲಾವಿದ್ಯೆಯನ್ನು ಅಂಗೀಕರಿಸಿದರೆ ಯಾವ ಯಾವ ದೋಷಗಳು ಬರುತ್ತವೆ ? ಎಂಬದನ್ನು ಈ ಕೆಳಗೆ ಸೂಚಿಸಿರುತ್ತೇನೆ.

(1) ಸೃಷ್ಟಿಗೆ ಪೂರ್ವದಲ್ಲಿ ಆತ್ಮನೊಬ್ಬನೇ ಇದ್ದನು ಎಂಬ ಶ್ರುತಿವಾಕ್ಯಗಳಿಗೆ ವಿರೋಧವಾಗುತ್ತದೆ.

(2) ಮೂಲಾವಿದ್ಯೆಯು ನಿಜವಾಗಿ ಇರುವದಲ್ಲ, ಜ್ಞಾನದಿಂದ ಬಾಧಿತವಾಗುತ್ತದೆ, ಆದುದರಿಂದ ವಿರೋಧ ಬರುವದಿಲ್ಲ—ಎಂದರೆ ಬಾಧಿತವಾದ ಮೇಲೆ ಅದ್ವೈತವಾಗಲಿ. ಅದು ಇರುವವರೆಗೆ ದ್ವೈತವೇ ಆಗುತ್ತದೆ. ಯಾವಾಗಲೂ ಅದ್ವೈತವೇ ಎಂಬುದಕ್ಕೆ ವಿರೋಧ ಬರುತ್ತದೆ.

(3) ಜ್ಞಾನವು ಅನಿರ್ವಚನೀಯವಸ್ತುವನ್ನಾಗಲೀ ನಿರ್ವಚನೀಯವಸ್ತುವನ್ನಾಗಲಿ ಬಾಧಿಸುವದಿಲ್ಲ. ವಸ್ತುವನ್ನು ಪ್ರಕಾಶಪಡಿಸುತ್ತದೆ—ಎಂಬ ಅನುಭವಕ್ಕೂ ಭಾಷ್ಯವಾಕ್ಯಗಳಿಗೂ ವಿರೋಧವಾಗುತ್ತದೆ.[1]

(4) ಮೂಲಾವಿದ್ಯೆಯು ಬ್ರಹ್ಮವನ್ನೇ ಆಶ್ರಯಿಸಿರುತ್ತದೆ, ಬ್ರಹ್ಮವನ್ನೇ ವಿಷಯಮಾಡಿಕೊಡಿರುತ್ತದೆ—ಎಂದು ಹೇಳುತ್ತಾರೆ. ಭಾಷ್ಯಕಾರರು ಬ್ರಹ್ಮವು ವಿಷಯವೇ ಅಲ್ಲ ಎಂದು ಹೇಳಿರುವದಕ್ಕೆ ಇದು ವಿರೋಧವಾಗುತ್ತದೆ.[2]

(5) ಮೂಲಾವಿದ್ಯೆಯು ಬ್ರಹ್ಮವನ್ನು ಆಶ್ರಯಿಸಿಕೊಂಡಿರುತ್ತದೆ

---

(1) ಸೂ. ಭಾ. ಜ್ಞಾನಂ ತು ಜ್ಞಾಪಕಂ, ನ ಕಾರಕಮ್ ||
ಬೃ. ಭಾ. ಜ್ಞಾನಂ ನ ವಸ್ತುನುತ್ ||

(2) ಸೂ. ಭಾ. ಅಧ್ಯಾ. ಕಥಂ ಪುನರವಿಷಯೇ ಬ್ರಹ್ಮಣಿ ಅಧ್ಯಾಸೋ ವಿಷಯತದ್ಧರ್ಮಾಣಾಮ್ ?

ಎಂದು ಹೇಳುತ್ತಾರೆ. ಜ್ಞಾನವು ಜೀವನನ್ನು ಆಶ್ರಯಿಸಿಕೊಂಡುಬರುತ್ತದೆ. ವಿದ್ಯಾವಿದ್ಯೆಗಳು ಭಿನ್ನಭಿನ್ನ ಸ್ಥಳಗಳಲ್ಲಿ ಇರುವವಾದ್ದರಿಂದ ಇವೆರಡಕ್ಕೂ ಪರಸ್ಪರಬಾಧ್ಯಬಾಧಕತ್ವ ಸಂಭವಿಸುವದಿಲ್ಲ,

(6) ಮೂಲಾವಿದ್ಯೆಯು ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಮೂರು ಅವಸ್ಥೆಗಳಲ್ಲಿಯೂ ದಂಡಾಯಮಾನವಾಗಿರುತ್ತದೆ ಎಂದು ಹೇಳುತ್ತಾರೆ. ಮೂರು ಅವಸ್ಥೆಗಳಲ್ಲಿಯೂ ಇದ್ದರೆ ದ್ವೈತವೇ ಪರಮಾರ್ಥವಾಗುತ್ತದೆ, ಅದ್ವೈತಹಾನಿಯಾಗುತ್ತದೆ.

(7) ನಿರ್ವಿಕಲ್ಪಕಸಮಾಧಿಯಲ್ಲಿ ಇರುವದಿಲ್ಲವೆಂದು ಹೇಳುವದಾದರೆ ಹೀಗೆಂದು ಹೇಳುವವನಿಗೂ ಕೇಳುವವನಿಗೂ ಸಮಾಧಿ ಗೊತ್ತಿಲ್ಲದಿರುವದರಿಂದ ಬರಿಯ ಶಬ್ದಪ್ರಮಾಣವನ್ನಾಗಿ **ನಂಬಬೇಕಾಗುತ್ತದೆ.**

(8) ಅಜ್ಞಾನವನ್ನು ಬಾಧಿಸಲು ಜ್ಞಾನವೇ ಬರಬೇಕಲ್ಲವೆ ? ನಿರ್ವಿಕಲ್ಪಕಸಮಾಧಿಯಲ್ಲಿ ಜ್ಞಾನವಿರುತ್ತದೆಯೆ ? ಜ್ಞಾನವಿದ್ದರೆ ನಿರ್ವಿಕಲ್ಪಕ ಸಮಾಧಿಯಾಗುತ್ತದೆಯೆ ?

(9) ಮೂಲಾಜ್ಞಾನವು ನಿರ್ವಿಕಲ್ಪಕ ಸಮಾಧಿಯಲ್ಲಿ ಹೋಗಿದ್ದರೆ ಪುನಃ ಎಚ್ಚರಕ್ಕೆ ಬರಲು ಕಾರಣವಿಲ್ಲದಹಾಗೆ ಆಗುವದಿಲ್ಲವೆ ?

(10) ಭಾಷ್ಯಕಾರರು ಏನನ್ನು ತೋರಿಸಬೇಕಾದರೂ ಮೂರು ಅವಸ್ಥೆಗಳಲ್ಲಿಯೇ ತೋರಿಸಬೇಕು[1] ಎಂದು ಹೇಳಿರುವ ವಾಕ್ಯಕ್ಕೆ ವಿರೋಧವಾಗುವದಿಲ್ಲವೆ ?

(11) ಶ್ರೀ ರಾಮಾನುಜಾಚಾರ್ಯರು ಹೇಳುವ ಸೂಕ್ಷ್ಮ ಅಚಿತ್ತಿಗೂ ಮೂಲಾವಿದ್ಯೆಗೂ ಏನು ಭೇದ ?

---

(1) ಮಾಂ. ಭಾ. 1–7 ಯದಿ ಹಿ ತ್ರ್ಯವಸ್ಥಾತ್ಮವಿಲಕ್ಷಣಂ ತುರೀಯಮನ್ಯತ್. ತತ್ಪ್ರತಿಪತ್ತಿದ್ವಾರಾಭಾವಾತ್ ಶಾಸ್ತ್ರೋಪದೇಶಾನರ್ಥಕ್ಯಂ, ಶೂನ್ಯತಾಪತ್ತಿರ್ವಾ ।

(12) ಸೂಕ್ಷ್ಮ ಅಚಿತ್ತೇಕೆ ಜ್ಞಾನಬಾಧ್ಯವಲ್ಲ ? ಇದೇಕೆ ಜ್ಞಾನ ಬಾಧ್ಯವಾಗುತ್ತದೆ ?

(13) ಮೂಲಾವಿದ್ಯೆಯ ಪರಿಣಾಮವೇ ದೇಹಾದಿಜಗತ್ತೆಲ್ಲವೂ ಆಗಿರುವದರಿಂದ ವಿದ್ಯೆಯಿಂದ ಮೂಲಾವಿದ್ಯೆಯು ಹೋಗುತ್ತದೆ ಎಂದು ಒಪ್ಪಿಕೊಂಡರೂ ದೇಹರೂಪದಲ್ಲಿರುವದರಿಂದ ದೇಹ ಬಿದ್ದುಹೋದ ಮೇಲಯೇ ಮೋಕ್ಷ ಬರಬೇಕಾಗುತ್ತದೆ.(1)

(14) ವಿದೇಹತಾಕಾಲೀನ ಏವ ಮೋಕ್ಷೋ ಮುಖ್ಯೋ ಮೋಕ್ಷಃ ಎಂದು ಹೇಳಿದರೆ ಜೀವನ್ಮುಕ್ತಿಯನ್ನು ಹೇಳುವ ಭಾಷ್ಯಕಾರರಿಗೆ ವಿರೋಧ ವಾಗುತ್ತದೆ.(2)

(15) ಶಂಕರಾಚಾರ್ಯರು ಜಗತ್ತಿಗೆ ಕಾರಣ ಬ್ರಹ್ಮ ಅಥವಾ ಅಧ್ಯಾಸ ಅಥವಾ ಅಧ್ಯಾಸಕಲ್ಪಿತಮಾಯಾ ಎಂದು ಹೇಳಿರುವದಕ್ಕೆ ಮೂಲಾ ವಿದ್ಯೆಯು ಉಪಾದಾನ ಕಾರಣವೆಂದರೆ ಭಾಷ್ಯವಾಕ್ಯಗಳಿಗೆ ವಿರೋಧ ಬರಲಿಲ್ಲವೆ ?

(16) ಅನಿರ್ವಚನೀಯವಸ್ತುಭೂತವಾದ ಮೂಲಾವಿದ್ಯೆಯು ಜ್ಞಾನ ಬಾಧ್ಯವಾಗುವುದು ಹೇಗೆ ? ಎಂಬುದಕ್ಕೆ ದೃಷ್ಟಾನ್ತವನ್ನು ಕೊಡಲು ಅನಿರ್ವಚನೀಯಶುಕ್ತಿರಜತವನ್ನು ಕಲ್ಪಿಸಿರುವುದು ಭಾಷ್ಯವಾಕ್ಯಕ್ಕೆ ವಿರುದ್ಧ ವಾದದ್ದಲ್ಲವೆ ? ಭಾಷ್ಯಕಾರರು ಪ್ರತ್ಯೇತ್ಯೇವ ಹಿ ಕೇವಲಂ ರಜತಮಿತಿ ನ ತು ತತ್ರ ರಜತಮಸ್ತಿ || ಎಂದು ಹೇಳಿದ್ದಾರೆ. ಯಾವ ಶಾಸ್ತ್ರಜ್ಞರೂ ಅನಿರ್ವಚನೀಯ ವಸ್ತೂತ್ಪತ್ತಿಯನ್ನು ಒಪ್ಪಲಿಲ್ಲ.

---

(1) ಅದ್ವೈತಸಿದ್ಧಿಃವಿದೇಹತಾಕಾಲೀನ ಏವ ಮೋಕ್ಷೋ ಮುಖ್ಯೋ ಮೋಕ್ಷಃ | ಜೀವನ್ಮುಕ್ತೇ ಗೌಣತ್ವಾತ್ ||

(2) ಸೂ. ಭಾ. 1–1–4 ಶರೀರೇ ಪತಿತೇ ಅಶರೀರತ್ವಂ ಸ್ಯಾತ್, ನ ಜೀವತಃ ಇತಿಚೇನ್ನ | ಸಶರೀರತ್ವಸ್ಯ ಮಿಥ್ಯಾಜ್ಞಾನ ನಿಮಿತ್ತತ್ವಾತ್ |

(18) ಮಾಂ. ಕಾ. ಭಾ. 2–31 ಮಾಯಾ ನಾಮ ಅಸದ್ವಸ್ತ್ವಾತ್ಮಿಕಾ ಸದ್ವಸ್ತ್ವಾತ್ಮಿಕೇವ ಅವಭಾಸಮಾನಾ ॥

ಮಾಯೆಯು ಇಲ್ಲದ್ದು ಇದ್ದಂತೆ ತೋರುವುದು.

ಮಾಂ. ಕಾ. ಭಾ. 4–58 ಮಾಯೇತ್ಯವಿದ್ಯಮಾನಸ್ಯ ಆಖ್ಯಾ

ಮಾಯೆಯೆಂಬುದು ಇಲ್ಲದೇ ಇರುವ ವಸ್ತುವಿನ ಹೆಸರು.

ಈ ವಾಕ್ಯಗಳಿಗೆ ವಿರೋಧವು ಸ್ಪಷ್ಟವಾಗಿದೆ.

ದೇಹೇಂದ್ರಿಯಾದಿಗಳಲ್ಲಿ ನಾನು ನನ್ನವು—ಎಂಬ ಜ್ಞಾನ ಮಿಥ್ಯಾಜ್ಞಾನ ಎಂಬುದನ್ನು ಎಲ್ಲರೂ ಬಲ್ಲರು. ಇದನ್ನು ಶಂಕರಾಚಾರ್ಯರು ಅವಿದ್ಯೆ ಎಂದು ಹೇಳಿರುತ್ತಾರೆ. ಉಪಾಧಿ ಎಂದರೆ ಯಾವದು ಆತ್ಮನ ಸ್ವರೂಪವಲ್ಲವೋ, ಆದರೆ ಆತ್ಮನು ಇದ್ದಾನೆ ಎಂದು ತಿಳಿಯುವುದಕ್ಕೆ ಬೇಕೇ ಬೇಕೋ, ಅದಕ್ಕೆ ಉಪಾಧಿ ಎಂದು ಹೆಸರು. ಉದಾಹರಣೆಗೆ ಬಲ್ಬು, ವೈರು, ಸ್ವಿಚ್= ಎಂಬುವುಗಳು ಎಲಕ್ಟ್ರಿಸಿಟಿಯಲ್ಲ, ಎಲಕ್ಟ್ರಿಸಿಟಿ ಇದೆ ಎಂದು ತಿಳಿಯಲು ಬಲ್ಬು, ವೈರು, ಸ್ವಿಚ್ ಮುಂತಾದವು ಬೇಕೇ ಬೇಕು. ಆದುದರಿಂದ ಇವುಗಳನ್ನು ಉಪಾಧಿ ಎಂದು ಕರೆಯುತ್ತಾರೆ. ಉಪಾದಿಗಳೇ ಎಲೆಕ್ಟ್ರಿಸಿಟಿಯಲ್ಲ. ಹೀಗೆಯೇ ದೇಹೇಂದ್ರಿಯಾದಿಗಳು ಉಪಾಧಿಗಳು. ಈಗ ಸಾಮಾನ್ಯವಾಗಿ ಎಲ್ಲರೂ ದೇಹವನ್ನು ನಾನು ಎಂತಲೂ ಇಂದ್ರಿಯಾದಿಗಳನ್ನು ನನ್ನವು ಎಂತಲೂ ತಪ್ಪಾಗಿ ತಿಳಿದಿದ್ದಾರೆ. ಈ ತಪ್ಪುತಿಳಿವಳಿಕೆಯೇ ಅನಾದ್ಯಧ್ಯಾಸ ಎಂದು ಭಾಷ್ಯಕಾರರು ಹೇಳಿದ್ದಾರೆ.[1] ಈ ಅಧ್ಯಾಸಕ್ಕೆ ಕಾರಣವು, ಪ್ರತಿಪತ್ತಿಕ್ರಮದಿಂದ ಸರಿಯಾಗಿ ತಿಳಿಯದೇ ಇರುವದು.

ತತ್ತ್ವಗ್ರಹಣಾಭಾವ ಏವ ಬೀಜಂ
ಅನ್ಯಥಾ ಗ್ರಹಣಂ ಕಾರ್ಯಮ್ ॥

---

(1) ಸೂ. ಭಾ. ಅಧ್ಯಾಸಭಾಷ್ಯ. ತಮೇತಮೇವಂಲಕ್ಷಣಂ ಅಧ್ಯಾಸಂ ಪಂಡಿತಾ ಅವಿದ್ಯೇತಿ ಮನ್ಯಂತೇ ॥

ಎಂದು ಭಾಷ್ಯಕಾರರು ಹೇಳಿರುತ್ತಾರೆ.

ಈ ಅವಿದ್ಯೆಯನ್ನು ಹೊಂದಿದ ಕೂಡಲೇ ಪ್ರಪಂಚವನ್ನು ನೋಡುತ್ತಾನೆ. ಪ್ರಪಂಚಕ್ಕೆ ಕಾರಣ ಯಾವುದು ಎಂದು ವಿಚಾರ ಮಾಡುತ್ತಾನೆ. ವಿಚಾರ ಮಾಡುವವನು ಯಾರು? ದೇಹೇಂದ್ರಿಯಾದಿಗಳಲ್ಲಿ ನಾನು ನನ್ನವು ಎಂಬ ಮಿಥ್ಯಾಜ್ಞಾನವುಳ್ಳವನೇ. ಮಿಥ್ಯಾಜ್ಞಾನ ಎಂದರೂ ಭ್ರಾಂತಿ ಎಂದು ಅಂದರೂ ಒಂದೇ. ಭ್ರಾಂತನೇ ಜಗತ್ತನ್ನು ನೋಡಿ ಕಾರಣವನ್ನು ಹುಡುಕುತ್ತಾನೆ. ಆದುದರಿಂದಲೇ ಒಬ್ಬೊಬ್ಬರು ಒಂದೊಂದು ಕಾರಣವನ್ನು ಹೇಳುತ್ತಾರೆ. ಯಾರೂ ಕಾರಣವನ್ನು ನೋಡಿದವರಲ್ಲ. ಸಾಂಖ್ಯರೂ ಯೋಗಿಗಳೂ ತ್ರಿಗುಣಗಳ ಸಾಮ್ಯಾವಸ್ಥಾರೂಪವಾದ ಪ್ರಧಾನವು ಕಾರಣವೆಂದು ಹೇಳುತ್ತಾರೆ. ನೈಯಾಯಿಕರೂ ವೈಶೇಷಿಕರೂ ಪರಮಾಣುವನ್ನು ಉಪಾದಾನ ಕಾರಣವನ್ನಾಗಿ ಹೇಳುತ್ತಾರೆ. ಪೂರ್ವಮೀಮಾಂಸಕರು ಪ್ರಕೃತಿಯನ್ನು ಜಗತ್ಕಾರಣವನ್ನಾಗಿ ಹೇಳುತ್ತಾರೆ.

ಪರಿಣಾಮವಾದಿಗಳಾದ ಶ್ರೀರಾಮಾನುಜಾಚಾರ್ಯರು ಸೂಕ್ಷ್ಮ ಅಚಿತ್ತನ್ನು ಜಗದುಪಾದಾನ ಕಾರಣವನ್ನಾಗಿ ಹೇಳುತ್ತಾರೆ.

ಮಾಧ್ವದ್ವೈತಿಗಳು ಪ್ರಕೃತಿಯನ್ನು ಉಪಾದಾನಕಾರಣವನ್ನಾಗಿ ಹೇಳುತ್ತಾರೆ.

ಭಾಷ್ಯವ್ಯಾಖ್ಯಾನಕಾರರು ತ್ರಿಗುಣಾತ್ಮಿಕವಾದ ಮೂಲಾವಿದ್ಯೆಯನ್ನು ಜಗದುಪಾದಾನ ಕಾರಣವನ್ನಾಗಿ ಹೇಳುತ್ತಾರೆ.

ಶ್ರುತಿಗಳು ಬ್ರಹ್ಮವನ್ನು ಉಪಾದಾನ ಕಾರಣವನ್ನಾಗಿ ಹೇಳುತ್ತಿವೆ.

ಶಂಕರಾಚಾರ್ಯರು ಅಧ್ಯಾಸವೆಂಬ ಅವಿದ್ಯೆಯನ್ನು ಕಾರಣವನ್ನಾಗಿ ಹೇಳಿದ್ದಾರೆ.[1] ಮತ್ತೂ ಅಧ್ಯಾಸದಿಂದ ಕಲ್ಪಿತವಾದ ಮಾಯೆಯನ್ನು

(1) ಗೀ. ಭಾ. 13–26 ಅಧ್ಯಾಸಾತ್ ಸರ್ವಂ ಸಂಜಾಯತೇ ।

ಉಪಾದಾನ ಕಾರಣವನ್ನಾಗಿಯೂ ಹೇಳಿದ್ದಾರೆ. ಅಧ್ಯಾಸಕಲ್ಪಿತವಾದುದು ಕಾರಣವೆಂದರೂ ಅಧ್ಯಾಸ ಕಾರಣವೆಂದರೂ ಅಧ್ಯಾಸಕಲ್ಪಿತವಾದದ್ದು ಇಲ್ಲದ್ದಾದ್ದರಿಂದ ಅಧ್ಯಾಸವೇ ಕಾರಣ ವೆಂದಾಗುತ್ತದೆ. ಬ್ರಹ್ಮವೇ ಜಗತ್ಕಾರಣವೆಂದೂ ಹೇಳಿದ್ದಾರೆ.

ಬ್ರಹ್ಮ ಜಗತ್ಕಾರಣವೆಂದರೆ ಬ್ರಹ್ಮವು ನಿರವಯವವೂ ನಿಷ್ಕ್ರಿಯವೂ ಆಗಿರುವದರಿಂದ ಅಧ್ಯಾಸದಿಂದ ಬ್ರಹ್ಮದಲ್ಲಿ ಜಗತ್ತು ಕಲ್ಪಿತವಾಗಿದೆ—ಎಂದೇ ಅರ್ಥ. ಇಲ್ಲಿಯೂ ಅಧ್ಯಾಸವೇ ಕಾರಣವಾಗಿರುತ್ತದೆ.

ಜಗತ್ತು ಅಧ್ಯಾಸದಿಂದ ಬ್ರಹ್ಮದಲ್ಲಿ ಕಲ್ಪಿತವಾಗಿದೆ–ಎಂಬುದು ಹೇಗೆ ? ಎಂದು ಕೇಳಿದರೆ ಅಧ್ಯಾಸವಿರುವ ಜಾಗ್ರತ್ ಸ್ವಪ್ನಗಳಲ್ಲಿ ಜಗತ್ತು ಕಾಣುತ್ತದೆ. ಅಧ್ಯಾಸವಿಲ್ಲದ ಸುಷುಪ್ತಿಯಲ್ಲಿ ಜಗತ್ತು ಕಾಣುವುದಿಲ್ಲ. ಯತ್ಸತ್ತ್ವೇ ಯತ್ಸತ್ತ್ವಂ ಯದಸತ್ತ್ವೇ ಯದಸತ್ತ್ವಂ ತತ್ತತ್ಕಾರ್ಯಮ್ ಎಂಬ ನ್ಯಾಯದಿಂದ ಅಧ್ಯಾಸವಿದ್ದರೇ ಜಗತ್ತು ಕಾಣುತ್ತದೆ. ಅಧ್ಯಾಸ ವಿಲ್ಲದಿದ್ದರೆ ಜಗತ್ತು ಕಾಣುವದಿಲ್ಲ ಎಂಬ ಕಾರಣದಿಂದ ಅಧ್ಯಾಸದ ಕಾರ್ಯವು ಜಗತ್ತು ಎಂದು ನಿರ್ಣಯವಾಗುತ್ತದೆ.

ಅಧ್ಯಾಸವೆಂದರೆ ತಪ್ಪುತಿಳಿವಳಿಕೆ. ತಪ್ಪುತಿಳಿವಳಿಕೆಯಿಂದ ಕಲ್ಪಿತ ವಾದದ್ದು ಪರಮಾರ್ಥವಾಗಿ ಇರುವದಲ್ಲ ಎಂದು ಸಿದ್ಧವಾಗುತ್ತದೆ.

ಈ ಅಧ್ಯಾಸವೆಂಬ ತಪ್ಪುತಿಳಿವಳಿಕೆಯನ್ನು ಅನುಭವಾವಸಾನ ವಾದ ಬ್ರಹ್ಮಜ್ಞಾನದಿಂದ ಬಾಧಿಸಿಕೊಂಡರೆ ಸ್ವಸ್ವರೂಪದಲ್ಲಿಯೇ ನಿಲ್ಲುತ್ತಾನೆ. ಸ್ವಸ್ವರೂಪಾವಸ್ಥಾನವೇ ಮೋಕ್ಷವೆಂದು ಭಗವಂತನು ಹೇಳಿರುತ್ತಾನೆ.[1]

ಬೃಹದಾರಣ್ಯಕಭಾಷ್ಯದಲ್ಲಿಯೂ ಸ್ವಸ್ವರೂಪಾವಸ್ಥಾನವನ್ನೇ ಮೋಕ್ಷವನ್ನಾಗಿ ಹೇಳಿರುತ್ತದೆ.[2]

---

1. ಭ. ಗೀ. ಭಾ. 18–66 ಸ್ವಸ್ವರೂಪಾವಸ್ಥಾನಂ ಮೋಕ್ಷಃ ||
2. ಬೃ. ಭಾ. 4–4–21 ಸ್ವಸ್ವರೂಪಾವಸ್ಥಾನಂ ಮೋಕ್ಷಃ ||

ಸೂತ್ರಭಾಷ್ಯದಲ್ಲಿಯೂ ಕೇವಲಾತ್ಮಸ್ವರೂಪಾವಗತಿಯನ್ನೇ ಕೈವಲ್ಯವನ್ನಾಗಿ ಹೇಳಿರುತ್ತದೆ.[1] ದೇಹೇಂದ್ರಿಯಾದಿಗಳಲ್ಲಿ ನಾನು ನನ್ನವು ಎಂಬ ಮಿಥ್ಯಾಜ್ಞಾನವನ್ನು ಅನುಭವಾವಸಾನವಾದ ತನ್ನ ಯಥಾರ್ಥಸ್ವರೂಪಜ್ಞಾನದಿಂದ ಬಾಧಿತವಾದದ್ದನ್ನಾಗಿ ಮಾಡಿಕೊಂಡರೆ ಸ್ವಸ್ವರೂಪಾವಸ್ಥಾನವು ತಾನಾಗಿಯೇ ಸಿದ್ಧವಾಗುತ್ತದೆಯಾದುದರಿಂದ ಮಿಥ್ಯಾಜ್ಞಾನವನ್ನು ಕಳೆದುಕೊಳ್ಳುವುದಕ್ಕೇ ಸಾಧನಗಳನ್ನು ಶಾಸ್ತ್ರದಲ್ಲಿ ಪ್ರತಿಪಾದಿಸಿರುತ್ತದೆ. ಅನುಭವಾವಸಾನವಾದ ಬ್ರಹ್ಮಜ್ಞಾನದಿಂದ ಅಧ್ಯಾಸನ್ನು ಹೋಗಲಾಡಿಸಿಕೊಂಡು ಸ್ವಸ್ವರೂಪದಲ್ಲಿ ನಿಲ್ಲುವುದೇ ಮೋಕ್ಷ॥ **ಇದೇ ಶಂಕರ ಸಿದ್ಧಾಂತ ॥**

ಸಾಮಾನ್ಯವಾಗಿ ಜನರು ದೇಹೇಂದ್ರಿಯಾದಿಗಳಲ್ಲಿ ನಾನು ನನ್ನವು ಎಂಬ ಭ್ರಾಂತಿಯುಳ್ಳವರಾಗಿಯೇ ಪ್ರಪಂಚವನ್ನು ನೋಡುತ್ತಾರೆ. ಅವರಿಗೆ ಅದು ಸತ್ಯವಾದದ್ದಾಗಿಯೇ ಕಾಣುತ್ತದೆ. ಅವರೇ ಅನುಭವಾವಸಾನವಾದ ತತ್ತ್ವಜ್ಞಾನದಿಂದ ಆ ಭ್ರಾಂತಿಯನ್ನು ಕಳೆದುಕೊಂಡು ಶುದ್ಧ ಚೈತನ್ಯಾತ್ಮಸ್ವರೂಪದಲ್ಲಿ ನಿಂತು ನೋಡಿದರೆ ಪ್ರಪಂಚವು ಹುಸಿತೋರಿಕೆ. ಆತ್ಮನೊಬ್ಬನೇ ಪರಮಾರ್ಥವಾಗಿರತಕ್ಕವನು — ಎಂಬುದನ್ನು ಕಂಡುಕೊಳ್ಳುತ್ತಾರೆ.

ಆತ್ಮನು ಹೇಗೆ ಅದ್ವಿತೀಯನೋ ಹಾಗೆಯೇ ಆತ್ಮಜ್ಞಾನವೂ ಅದ್ವಿತೀಯವಾಗಿದೆ. ಆದುದರಿಂದ ಈ ಜ್ಞಾನವೂ ಇನ್ನೊಂದು ಜ್ಞಾನದಿಂದ ಬಾಧಿತವಾಗಬಹುದಲ್ಲ? ಎಂದು ಶಂಕಿಸಲು ಇನ್ನೊಂದು ಜ್ಞಾನವೇ ಇರುವದಿಲ್ಲ. ಈ ಜ್ಞಾನವೂ ಆತ್ಮನೊಬ್ಬನೇ ಪರಮಾರ್ಥ ಸತ್ಯನು. ಅನಾತ್ಮವೆಲ್ಲವೂ ಭ್ರಾಂತಿಕಲ್ಪಿತವಾದದ್ದೆಂದು ತಿಳಿಸಿ ತಾನೂ ಅನಾತ್ಮವಾಗಿರುವದರಿಂದ ಆತ್ಮನಲ್ಲಿ ಲಯವಾಗುತ್ತದೆ.

---

(1) ಸೂ. ಭಾ. 1–3–12 ವಿವೇಕಜ್ಞಾನಫಲಂ ಕೇವಲಾತ್ಮಾವಗತಿಃ ॥

# ಆತ್ಮನು ಅಪ್ರಮೇಯನು

ತರ್ಕಶಾಸ್ತ್ರಪ್ರವರ್ತಕರಾದ ಗೌತಮಋಷಿಗಳು ಯಾವದೊಂದು ಸಿದ್ಧವಾಗಬೇಕಾದರೂ ಪ್ರಮಾಣದಿಂದಲೇ ಸಿದ್ಧವಾಗಬೇಕೆಂದು ತಿಳಿದು "ಓಂ ನಮಃ ಪ್ರಮಾಣಾಯ" ಎಂದು ಪ್ರಮಾಣಕ್ಕೆ ಮೊದಲು ನಮಸ್ಕರಿಸಿರುತ್ತಾರೆ; ಆದರೆ ಆತ್ಮನು ಪ್ರಮಾಣಸಿದ್ಧನಲ್ಲ ಸ್ವತಸ್ಸಿದ್ಧನು. ಪ್ರಮಾಣಗಳೇ ಆತ್ಮನಿಂದ ಸಿದ್ಧವಾಗಬೇಕು ಎಂಬುದನ್ನು ಅವರು ತಿಳಿಯಲಿಲ್ಲ. ಪ್ರಮೇಯಗಳು ಪ್ರಮಾಣದಿಂದಲೇ ಸಿದ್ಧವಾಗಬೇಕೆಂಬುದು ನಿಜವಾದದ್ದು. ಪ್ರಮಾತೃಸಿದ್ಧಿಗೇ ಪ್ರಮಾಣ ಬೇಕಿಲ್ಲ. ಮೊದಲು ಪ್ರಮಾತೃವು ಸ್ವತಸ್ಸಿದ್ಧನಾಗಿ ಪ್ರಮಾಣಗಳನ್ನು ಸಿದ್ಧಿಸಬೇಕು. ಅನಂತರ ಪ್ರಮಾತೃವು ಪ್ರಮಾಣಗಳಿಂದ ಪ್ರಮೇಯಗಳನ್ನು ಸಿದ್ಧಿಸಬೇಕು. ಮೊದಲು ಪ್ರಮಾತಾ ಅನಂತರ ಪ್ರಮಾಣಗಳು ಅನಂತರ ಪ್ರಮೇಯಗಳು. ಪ್ರಮಾತೃವು ಸ್ವತಸಿದ್ಧನಾಗಿ ಪ್ರಮೇಯಗಳ ಸಿದ್ಧಿಗಾಗಿ ಪ್ರಮಾಣಗಳನ್ನು ಬಯಸುತ್ತಾನೆ. ಇದು ಎಲ್ಲರ ಅನುಭವದಲ್ಲಿರತಕ್ಕ ವಿಷಯವಾಗಿದೆ.

ನಾನು ಇದ್ದೇನೆಯೋ ಇಲ್ಲವೋ ಎಂದು ಹುಚ್ಚನನ್ನು ಬಿಟ್ಟು ಮತ್ತೆ ಯಾರೂ ಸಂಶಯಪಡುವದಿಲ್ಲ. ಪ್ರಮಾತೃವಿನ ಸಿದ್ಧಿಗೇ ಪ್ರಮಾಣಗಳು ಬೇಕಿಲ್ಲದಿರುವದರಿಂದ ನಿಜವಾದ ಸ್ವತಸ್ಸಿದ್ಧನಾದ ಆತ್ಮನನ್ನು ಪ್ರಮಾಣಗಳು ಸಿದ್ಧಿಸಬೇಕೆ? ಎಂದಿಗೂ ಇಲ್ಲ. ಇವನು ಸ್ವತಸಿದ್ಧನು ಹೇಗೆ? ಎಂದರೆ ಆತ್ಮನು ಅಪರೋಕ್ಷನಾಗಿರುವದರಿಂದ ಎಂದು ಹೇಳಬೇಕು. ಅಪರೋಕ್ಷನು ಎಂದರೆ **ತಾನು ತಾನಾಗಿಯೇ ತನ್ನನ್ನು ತನ್ನಿಂದಲೇ ತಿಳಿಯುತ್ತಾನೆ** ಎಂದರ್ಥ. (1) ಇವನು ಪ್ರಮಾಣಗಳಿಗೆ ಸಿಕ್ಕತಕ್ಕವನಲ್ಲ. (1) ಪ್ರಮಾಣಗಳೇ ಇವನಿಂದ ಸಿದ್ಧವಾದವುಗಳಾಗಬೇಕು.

---

(1) ಸೂ. ಭಾ. ಅಧ್ಯಾಸಭಾಷ್ಯ. ಅಪರೋಕ್ಷತ್ವಾಚ್ಚ ಪ್ರತ್ಯಗಾತ್ಮಪ್ರಸಿದ್ಧೇಃ ||
(1) (ಕೇನ) ನತತ್ರ ಚಕ್ಷುರ್ಗಚ್ಛತಿ ನವಾಗ್ಗಚ್ಛತಿ ನೋಮನಃ ||

# ಅವಸ್ಥಾತ್ರಯ ವಿಚಾರ

ಅವಸ್ಥಾತ್ರಯ ವಿಚಾರದಿಂದಲೂ ಆತ್ಮನೊಬ್ಬನೇ ಪರಮಾರ್ಥಸತ್ಯನು. ಪ್ರಪಂಚವು ಪರಮಾರ್ಥವಾಗಿ ಇರುವದಲ್ಲ-ಎಂಬುದು ಸಿದ್ಧವಾಗುತ್ತದೆ.

ಅಮರಸಿಹ್ಮನು ಅಮರಕೋಶದಲ್ಲಿ ಹೇಳಿರುವಂತೆ (ವಿಶೇಷಃ ಕಾಲಿಕೋಽವಸ್ಥಾ) ಕಾಲದಲ್ಲಿ ಆಗತಕ್ಕ ವಿಶೇಷವು ಇಲ್ಲಿ ಅವಸ್ಥೆಯಲ್ಲ. ಮತ್ತೇನೆಂದರೆ ಪರಮಾತ್ಮನು ತೋರಿಕೊಳ್ಳುವ ಮೂರು ವಿಧ = ಎಂದು ಅರ್ಥ.

ಎಚ್ಚರ, ಕನಸು, ನಿದ್ರೆ ಎಂಬ ಮೂರು ಅವಸ್ಥೆಗಳನ್ನು ಪ್ರತಿಯೊಬ್ಬನೂ ಪ್ರತಿದಿನವೂ ಅನುಭವಿಸುತ್ತಲೇ ಇದ್ದಾನೆ.

ಈ ಮೂರೂ ಅವಸ್ಥೆಗಳನ್ನು ಸಾಮಾನ್ಯವಾಗಿ ದರ್ಶನಕಾರರೆಲ್ಲರೂ ಜಾಗ್ರದ್ದೃಷ್ಟಿಯಿಂದಲೇ ವಿಚಾರ ಮಾಡಿರುತ್ತಾರೆ. ಜಾಗ್ರತ್ತಿನಲ್ಲಿ ನಿಂತು ಸ್ವಪ್ನವನ್ನು ವಿಚಾರಮಾಡಿ, ಸ್ವಪ್ನವೆಂಬುದು ಜಾಗ್ರತ್ತಿನ ಮನಸ್ಸಿನ ವಿಕಾರ, ಎಂದೇ ತೀರ್ಮಾನಿಸಿರುತ್ತಾರೆ.

ಮನಶ್ಶಾಸ್ತ್ರಜ್ಞರೂ ಕೂಡ ಹೀಗೆಯೇ ಹೇಳುತ್ತಾರೆ. ಎಚ್ಚರದಲ್ಲಿ ಮನುಷ್ಯನಾಗಿದ್ದವನು ಸ್ವಪ್ನದಲ್ಲಿ ಮೃಗವಾಗಿರುತ್ತಾನಲ್ಲ? ಎಚ್ಚರದ ಮನಸ್ಸೇ ಅಲ್ಲಿದ್ದರೆ ಅದು ಹೇಗೆ ಒಪ್ಪುತ್ತದೆ? ಎಚ್ಚರದಲ್ಲಿ ಅಸಂಭವವಾಗಿರುವ ತನ್ನ ತಲೆಯನ್ನು ತಾನೇ ಕತ್ತರಿಸಿ ತನ್ನ ಕೈಯ್ಯಲ್ಲಿಟ್ಟುಕೊಂಡು ತಾನೇ ವರ್ಣಿಸುವುದನ್ನು ಕನಸ್ಸಿನಲ್ಲಿ ನೋಡುತ್ತಾನಲ್ಲವೆ? ಎಚ್ಚರದ ಮನಸ್ಸು ಕನಸ್ಸಿನಲ್ಲಿದ್ದಿದ್ದರೆ ಇದು ಹೇಗೆ ಸಂಭವವಾಗುತ್ತದೆ? ಎಂದು ಕೇಳಿದರೆ "ಇದು ಅಬ್ನಾರ್ಮಲ್ ಸೈಕಾಲಜಿ" ಎಂದು ಉತ್ತರವನ್ನು ಕೊಡುತ್ತಾರೆ.

ಶಂಕರಾಚಾರ್ಯರೂ ಗೌಡಪಾದಾಚಾರ್ಯರೂ ಹೇಗೆ ಹೇಳುತ್ತಾರೆ? ಎಂದರೆ —

ಎಚ್ಚರದ ಜೀವ ಎಚ್ಚರದ ಪ್ರಮಾಣಗಳು ಎಚ್ಚರದ ಪ್ರಪಂಚ= ಎಚ್ಚರಕ್ಕೇ ಕಟ್ಟುಬಿದ್ದವುಗಳು.

ಸ್ವಪ್ನದ ಜೀವ ಸ್ವಪ್ನದ ಪ್ರಮಾಣಗಳು ಸ್ವಪ್ನದ ಪ್ರಪಂಚ ಸ್ವಪ್ನಕ್ಕೇ ಕಟ್ಟು ಬಿದ್ದವುಗಳು. ಸ್ವಪ್ನದ ಜೀವ ಸ್ವಪ್ನದ ಪ್ರಮಾಣ ಸ್ವಪ್ನದ ಪ್ರಪಂಚ ಎಚ್ಚರದಲ್ಲಿಲ್ಲ — ಎಂದದ್ದರಿಂದ ಇವು ಬರೀ ತೋರಿಕೆಗಳು ನಿಜವಾಗಿ ಇರುವವಲ್ಲ. ಆತ್ಮನಿಗೆ ಸೇರಿದವುಗಳಲ್ಲ, ಎಂದು ನಿರ್ಣಯವಾಗುತ್ತದೆ. ಹೀಗೆಯೇ ಎಚ್ಚರದ ಜೀವ ಎಚ್ಚರದ ಪ್ರಮಾಣಗಳು ಎಚ್ಚರದ ಪ್ರಪಂಚ— ಸ್ವಪ್ನದಲ್ಲಿಲ್ಲದ್ದರಿಂದ ಇವೂ ಬರೀ ಹುಸಿ ತೋರಿಕೆಗಳು ಎಂದು ಸಿದ್ಧವಾಗುತ್ತವೆ. ಸ್ವಪ್ನದ ಜೀವನು ಎಚ್ಚರಕ್ಕೆ ಬರುವಹಾಗಿಲ್ಲದಿರುವದರಿಂದ ಎಚ್ಚರದಲ್ಲಿ ಬಂದದ್ದನ್ನೂ ಹೋದದ್ದನ್ನೂ, ಎಚ್ಚರದ ಜೀವನು ಸ್ವಪ್ನಕ್ಕೆ ಹೋಗುವ ಹಾಗಿಲ್ಲದಿರುವದರಿಂದ ಸ್ವಪ್ನದಲ್ಲಿ ಬಂದದ್ದನ್ನೂ ಹೋದದ್ದನ್ನೂ ನೋಡುವವನು ಜೀವನಲ್ಲ ಎಂದೂ ಎರಡು ಅವಸ್ಥೆಗಳಲ್ಲಿಯೂ ಇರುವವನು ಸಾಕ್ಷಿಸ್ವರೂಪನಾದ ಆತ್ಮನೆಂದೂ ನಿಶ್ಚಯವಾಗಿ ತಿಳಿದು ಬರುತ್ತದೆ. ಎಚ್ಚರದ ಜೀವ ಪ್ರಮಾಣ ಮತ್ತು ಪ್ರಪಂಚ ಸ್ವಪ್ನದ ಜೀವ ಪ್ರಮಾಣ ಮತ್ತೂ ಪ್ರಪಂಚ—ಯಾವದೊಂದೂ ಸುಷುಪ್ತಿಯಲ್ಲಿ ಇಲ್ಲದಿರುವದರಿಂದಲೂ ಸಾಕ್ಷಿಸ್ವರೂಪನಾದ ಆತ್ಮ ಮಾತ್ರ ಮೂರು ಅವಸ್ಥೆಗಳಲ್ಲಿಯೂ ಇಲ್ಲ ಎಂದು ಅನ್ನಿಸಿಕೊಳ್ಳದೇ ಇರುವದರಿಂದಲೂ ಆತ್ಮನು ಪರಮಾರ್ಥ ಸತ್ಯನು ಎಂದು ಸಿದ್ಧವಾಗುತ್ತದೆ. ಪ್ರಪಂಚವು ಬರೀ ಹುಸಿ ತೋರಿಕೆಯರೂಪದ್ದು. ಅಸಂಗನಾದ ಆತ್ಮನ ಸ್ವರೂಪಕ್ಕೆ ಇವೆರಡೂ ಸೇರಿದವುಗಳಲ್ಲ ಇವು ಇರುವವುಗಳಲ್ಲ, ಎಂದೂ ಆತ್ಮನು ಮಾತ್ರ ಸಾಕ್ಷಿಸ್ವರೂಪದಿಂದ "ಇಲ್ಲ" ಎಂದು ಅನ್ನಿಸಿಕೊಳ್ಳದೇ ಇರುವದರಿಂದ ಪರಮಾರ್ಥ ಸತ್ಯನು ಅದ್ವಿತೀಯನು ಅಖಂಡನು ವ್ಯಾಪಕನು ಎಂದೂ ಸಿದ್ಧವಾಯಿತು. ಸುಷುಪ್ತಿಗೆ ಹೋಗುವದಕ್ಕೆ ಮುಂಚೆ ಜೀವನಾಗಿದ್ದ, ಎಚ್ಚತ್ತ ಮೇಲೆ, ಜೀವನಾಗಿರುತ್ತಾನೆ ಮಧ್ಯೇ ಜೀವನಾಗಿ ಇರಲಿಲ್ಲ ಎಂಬುದು ಸರಿಯಲ್ಲ ಅಲ್ಲಿಯೂ ಇದ್ದ ಎಂದು ಅನುಮಾನ ಮಾಡಬೇಕು – ಎಂದರೆ ಸುಷುಪ್ತಿಯನ್ನು ನೀವೇ ಅನುಭವಿಸಿದ್ದೀರಲ್ಲ ಅಲ್ಲಿ ಜೀವನಾಗಿ ಇಲ್ಲದ್ದನ್ನು ಅನುಭವಿಸಿ ಅನುಭವಕ್ಕೆ ವಿರುದ್ಧವಾಗಿ ಅನುಮಾನ

ಮಾಡಿದರೆ ಅದು ಪ್ರಮಾಣಸಿದ್ಧವಾಗುತ್ತದೆಯೆ? ಇಲ್ಲ. ಸುಷುಪ್ತಿಯಲ್ಲಿ "ನಾನು ಇದ್ದೇನೆ" ಎಂಬ ಅನುಭವವೂ ಇಲ್ಲದ್ದರಿಂದ ಆತ್ಮನೂ ಇರಲಿಲ್ಲ ಎಂದೇ ಏಕೆ ಹೇಳಬಾರದು? ಎಂದರೆ ಎಚ್ಚತ್ತ ಮೇಲೆ "ನಾನು ಸುಖವಾಗಿ ನಿದ್ದೆಮಾಡಿದೆನು. ಏನನ್ನೂ ತಿಳಿಯಲಿಲ್ಲ." ಎಂದು ಹೇಳುವದರಿಂದ ತಾನೇ ಇಲ್ಲದೆ ನಾನು ಸುಖವಾಗಿ ನಿದ್ದೆಮಾಡಿದೆನು ಎಂದು ಹೇಳುವದು ಹೇಗೆ? ಹೀಗೆ ಹೇಳುವದರಿಂದ ಜೀವರೂಪದಿಂದ ಇರಲಿಲ್ಲ; ಸಾಕ್ಷಿರೂಪದಿಂದ ಇದ್ದನು. ಜೀವತ್ವವನ್ನು ಕಳೆದುಕೊಂಡ ಸಾಕ್ಷಿರೂಪವೇ ಇವನ ಪರಮಾರ್ಥ ಸ್ವರೂಪವು, ಇವನೇ ಉಪಾಧಿಯಿಂದ ಜೀವನೆಂದು ಎಚ್ಚರದಲ್ಲಿ ವ್ಯವಹರಿಸಲ್ಪಟ್ಟಿದ್ದಾನೆ ಎಂದೂ ನಿರ್ಣಯವಾಯಿತು.[1]

ವ್ಯಾಖ್ಯಾನಕಾರರು ಮೂರು ಅವಸ್ಥೆಗಳಲ್ಲಿಯೂ ದಂಡಾಯಮಾನವಾಗಿ ಮೂಲಾವಿದ್ಯೆಯು ಇರುತ್ತದೆ ಎಂದು ಹೇಳುತ್ತಾರೆ. ವಿವರಣಾಚಾರ್ಯರು ಬ್ರಹ್ಮದಲ್ಲಿ ಅವಿದ್ಯಾಸಾಂಕರ್ಯಪರಿಹಾರಾರ್ಥವಾಗಿ ಜೀವಬ್ರಹ್ಮವಿಭಾಗವು ಅನುಮಾನದಿಂದ ಸಿದ್ಧಿಸಲ್ಪಡುತ್ತದೆ. ಎಂದು ಬರೆದಿದ್ದಾರೆ.

ಅವರ ಅನುಭವದಲ್ಲಿಯೇ ಗಾಢನಿದ್ದೆಯಲ್ಲಿ ಏನನ್ನೂ ನೋಡಲಿಲ್ಲ ಎಂಬು ಸಿದ್ಧವಾಗಿದೆ. "ಏನನ್ನೂ ತಿಳಿಯಲಿಲ್ಲ. ಸುಖವಾಗಿ ನಿದ್ದೆಮಾಡಿದೆನು" ಎಂದು ಎಚ್ಚತ್ತಮೇಲೆ ಹೇಳುವದರಿಂದ ಯಾವದೂ ಇರಲಿಲ್ಲ ಎಂಬುದು ಗೊತ್ತಾಗುತ್ತದೆ. ಅನುಭವಕ್ಕೆ ವಿರುದ್ಧವಾಗಿ ಜೀವಬ್ರಹ್ಮವಿಭಾಗವಿತ್ತು ಎಂದು ಅನುಮಾಡಬಹುದೆ? ಅನುಭವಕ್ಕೆ ವಿರುದ್ಧವಾದ ಅನುಮಾನವು ಪ್ರಮಾಣವಾಗುವದಿಲ್ಲವಲ್ಲ ?

---

(1) ಸೂ. ಭಾ. ಸ್ವಪ್ನಾನ್ತಬುದ್ಧಾನ್ತಯೋರುಭಯೋರಿತರೇತರವ್ಯಭಿಚಾರಾತ್ ಆತ್ಮನೋ ಅನನ್ವಾಗತತ್ವಂ ಸಂಪ್ರಸಾದೇ ಚ ಪ್ರಪಂಚ-ಪರಿತ್ಯಾಗೇನ ಸದಾತ್ಮನಾ ಸತ್ಸಂಪತ್ತೇಃ ನಿಷ್ಪ್ರಪ್ರಂಚ-ಸದಾತ್ಮತ್ವಂ ಪ್ರಪಂಚಸ್ಯ ಬ್ರಹ್ಮಪ್ರಭವತ್ವಾತ್ ಕಾರ್ಯಕಾರಣಾನನ್ಯತ್ವನ್ಯಾಯೇನ ಬ್ರಹ್ಮಾವ್ಯತಿರೇಕಃ || ಇತ್ಯಾದಿ ||

ವ್ಯಾಖ್ಯಾನಕಾರರು ಹೇಳುವಂತೆ ಮೂರು ಅವಸ್ಥೆಗಳಲ್ಲಿಯೂ ದಂಡಾಯಮಾನವಾಗಿ ಮೂಲಾವಿದ್ಯೆಯು ಇದ್ದರೆ ಮೂಲಾವಿದ್ಯೆಯು ಬ್ರಹ್ಮದಂತೆ ಪರಮಾರ್ಥವಾದದ್ದು ಆಗುವದಿಲ್ಲವೆ ? ಆಗ ದ್ವೈತವೇ ಆಗುವದಿಲ್ಲವೇ ? ಛಾಂದೋಗ್ಯದಲ್ಲಿ ಸುಷುಪ್ತೌ "ಜೀವಃ ಜೀವತ್ವವಿನಿರ್ಮುಕ್ತಂ ಸ್ವಂ ದೇವತಾರೂಪಂ ಆಪ್ಯೇತಿ" ಎಂದು ಬರೆದಿರುವದಕ್ಕೆ ವಿರುದ್ಧವಾಗುವುದಿಲ್ಲವೆ ?

ಬೃಹದಾರಣ್ಯಕದಲ್ಲಿ ಪಶ್ಯನ್ ವೈ ನಪಶ್ಯತಿ ನ ತು ತದ್ವಿತೀಯಮಸ್ತಿ ಎಂದು ಸ್ಪಷ್ಟವಾಗಿ "ಆತ್ಮನು ನೋಡುವವನಾಗಿದ್ದಾನೆ. ಅಲ್ಲಿ ಎರಡನೆಯುದು ಇಲ್ಲ ; ಆದ್ದರಿಂದ ನೋಡುವದಿಲ್ಲ."[1] ಎಂಬ ವಾಕ್ಯಕ್ಕೆ ವಿರೋಧವಾಗಲಿಲ್ಲವೆ ?

ನಿರ್ವಿಕಲ್ಪಕ ಸಮಾಧಿಯಲ್ಲಿ ಮೂಲಾ ವಿದ್ಯೆಯು ಇರುವದಿಲ್ಲ. ಆದುದರಿಂದ ಅದು ಪರಮಾರ್ಥವಾದದ್ದಾಗುವದಿಲ್ಲ ಎಂದು ಹೇಳುವದಾದರೆ ಅಲ್ಲಿ ಅವಿದ್ಯೆಯನ್ನು ಕಳೆಯಲು ವಿದ್ಯೆ ಇರುತ್ತದೆಯೆ ? ವಿದ್ಯೆ ಇದ್ದರೆ ನಿರ್ವಿಕಲ್ಪಕ ಸಮಾಧಿಯಾಗುತ್ತದೆಯೆ ? ವಿದ್ಯೆ ಇಲ್ಲದಿದ್ದರೆ ಅವಿದ್ಯೆಯು ಏತರಿಂದ ಹೋಗುತ್ತದೆ ?

ನಿರ್ವಿಕಲ್ಪಕ ಸಮಾಧಿಯಲ್ಲಿ ಅವಿದ್ಯೆಯು ಹೋಗಿರುತ್ತದೆ ಎಂದು ಒಪ್ಪಿಕೊಂಡರೂ ಸಮಾಧಿಸ್ಥನು ಎಚ್ಚರಕ್ಕೆ ಬಂದೇ ಮೂಲಾವಿದ್ಯೆಯು ಸಮಾಧಿಯಲ್ಲಿ ಇರಲಿಲ್ಲ ಎಂದು ಹೇಳಬೇಕಲ್ಲವೆ ? ಎಚ್ಚರದ ಪ್ರಪಂಚಕ್ಕೆ ಕಾರಣವಾದ ಮೂಲಾವಿದ್ಯೆಯು ಹೋದದ್ದು ಪುನಃ ಹೇಗೆ ಬರುತ್ತದೆ ?

---

(1) ಬೃ. ಪಶ್ಯನ್ ವೈ ನ ಪಶ್ಯತಿ. ನ ತು ತದ್ದ್ವಿತೀಯಮಸ್ತಿ ಯದ್ವಿಭಕ್ತಂ ಪಶ್ಯೇತ್ ||

# ವಿದ್ಯಾಽವಿದ್ಯಾವಿಚಾರ

| | |
|---|---|
| ಆತ್ಮನು ಶುದ್ಧ ಚಿನ್ಮಾತ್ರನು | ಪ್ರಪಂಚವು ಜಡವಾದದ್ದು |
| ಆತ್ಮನು ನಿರವಯವನು | ದೇಹಾದಿಪ್ರಪಂಚವು ಸಾವಯವವಾದದ್ದು |
| ಆತ್ಮನು ವಿಷಯೀ | ಪ್ರಪಂಚವು ವಿಷಯ |
| ಆತ್ಮನು ನಿತ್ಯನು | ದೇಹಾದಿ ಪ್ರಪಂಚವು ಅನಿತ್ಯವಾದದ್ದು. |

ಎಂದು ಮುಂತಾದ ಆತ್ಮಾನಾತ್ಮಗಳ ವಿವೇಕದಿಂದ ಆತ್ಮಸ್ವರೂಪಾವಧಾರಣೆಯನ್ನು ವಿದ್ಯೆಯೆಂದು ಹೇಳುತ್ತಾರೆ.[1] ಆತ್ಮಾನಾತ್ಮರನ್ನು ಒಂದನ್ನು ಮತ್ತೊಂದನ್ನಾಗಿ ತಿಳಿಯುವದೇ ಅವಿದ್ಯಾ—ಅಂದರೆ ದೇಹೇಂದ್ರಿಯಾದಿಗಳನ್ನು ನಾನು ನನ್ನವು ಎಂದು ತಿಳಿಯುವದೇ ಅವಿದ್ಯಾ.[2] ವಿದ್ಯೆಯು ಮನಸ್ಸಿನ ಸರಿಯಾದ ವೃತ್ತಿ. ಅವಿದ್ಯೆಯು ಮನಸ್ಸಿನ ತಪ್ಪುವೃತ್ತಿ. ವಿದ್ಯಾವಿದ್ಯೆಗಳು ಪರಸ್ಪರ ವಿರುದ್ಧವಾದವುಗಳಾದುದರಿಂದ ಒಬ್ಬನಲ್ಲಿ ಏಕಕಾಲದಲ್ಲಿ ಅವಿದ್ಯೆ ಇದ್ದರೆ ವಿದ್ಯೆ ಇರುವುದಿಲ್ಲ. ವಿದ್ಯೆ ಬಂದರೆ ಅವಿದ್ಯೆ ಇರುವುದಿಲ್ಲ. ವಿದ್ಯೆಯು ಬಂದರೆ, ಬೆಳಕು ಬಂದರೆ ಕತ್ತಲೆ ಇಲ್ಲದಿರುವಂತೆ ಅವಿದ್ಯೆಯು ಬಾಧಿತವಾಗುತ್ತದೆ. ನಾನು ದೇಹೀ ಎಂಬ ತಪ್ಪು ತಿಳಿವಳಿಕೆಯು ನಾನು ಬ್ರಹ್ಮ ಎಂಬ ಸರಿಯಾದ ತಿಳಿವಳಿಕೆ ಬಂದರೆ ಬಾಧಿತವಾಗುತ್ತದೆ.

ವ್ಯಾಖ್ಯಾನಕಾರರು ಹೇಳುವ ಮೂಲಾವಿದ್ಯೆಯನ್ನು ಒಪ್ಪಿಕೊಂಡರೆ

---

(1) ಸೂ. ಭಾ. ಅಧ್ಯಾಸ ಭಾಷ್ಯ. ತದ್ವಿವೇಕೇನ ವಸ್ತುಸ್ವರೂಪಾವಧಾರಣಂ ವಿದ್ಯಾಮಾಹುಃ

(2) ತಮೇತ ಮೇವಂ ಲಕ್ಷಣಂ ಅಧ್ಯಾಸಂ ಪಂಡಿತಾ ಅವಿದ್ಯೇತಿ ಮನ್ಯಂತೇ

ಮೂಲಾವಿದ್ಯೆಗೂ ವಿದ್ಯೆಗೂ ಬಾಧ್ಯಬಾಧಕತ್ವ ಬರುವದಿಲ್ಲ. ಏಕೆಂದರೆ ವಿದ್ಯೆಯು ಮನಸ್ಸಿನಲ್ಲಿರತಕ್ಕದ್ದು. ಮೂಲಾವಿದ್ಯೆಯು ಬ್ರಹ್ಮವನ್ನು ಆಶ್ರಯಿಸಿ ಕೊಂಡು ಬ್ರಹ್ಮವನ್ನು ವಿಷಯ ಮಾಡಿಕೊಂಡಿರತಕ್ಕದ್ದು.

ವಿದ್ಯೆಯು ಮನೋವೃತ್ತಿ. ಮೂಲಾವಿದ್ಯೆಯು ಅನಿರ್ವಚನೀಯ ವಸ್ತು. ವಿದ್ಯೆಯು ಜೀವನ ಮನಸ್ಸಿನಲ್ಲಿರತಕ್ಕದ್ದು. ಮೂಲಾವಿದ್ಯೆಯು ಬ್ರಹ್ಮವನ್ನು ಆಶ್ರಯಿಸಿಕೊಂಡು ಇರತಕ್ಕದ್ದು. ಭಿನ್ನಸ್ಥಳಗಳಲ್ಲಿರುವವುಗಳಿಗೆ ಬಾಧ್ಯ ಬಾಧಕತ್ವ ಬರುವದಿಲ್ಲ ಮತ್ತು ವಸ್ತುವನ್ನು ಜ್ಞಾನವು ನಾಶಮಾಡುವ ದಿಲ್ಲ; ಪ್ರತ್ಯುತ ಇರತಕ್ಕದ್ದನ್ನು ಪ್ರಕಾಶಪಡಿಸುತ್ತದೆ. ಭಾಷ್ಯಕಾರರು 'ಜ್ಞಾನಂತು ಜ್ಞಾಪಕಂ ನ ಕಾರಕಂ' ಎಂದು ಹೇಳಿದ್ದಾರೆ. ಮತ್ತು 'ಜ್ಞಾನಂ ನ ವಸ್ತುನುತ್' ಎಂತಲೂ ಹೇಳಿದ್ದಾರೆ. ಸಾರ್ವತ್ರಿಕಾನುಭವದಲ್ಲಿಯೂ ಯಾರೂ ಜ್ಞಾನವು ವಸ್ತುವನ್ನು ನಾಶಮಾಡಿದ್ದನ್ನು ನೋಡಿಲ್ಲ ಜ್ಞಾನವು ವಸ್ತುವು ಉತ್ತಮವಾಗಿರಲಿ ಕೆಟ್ಟುಹೋಗಿರಲಿ ಅದು ಇರುವಂತೆ ಪ್ರಕಾಶ ಪಡಿಸುತ್ತದೆ. ಅದನ್ನು ನಾಶಮಾಡುವದಿಲ್ಲ. ಆದುದರಿಂದ ಜ್ಞಾನವು ಅನಾದ್ಯ ನಿರ್ವಚನೀಯವಸ್ತುಭೂತವಾದ ಮೂಲಾವಿದ್ಯೆಯನ್ನು ಬಾಧಿಸುತ್ತದೆ ಎಂಬುದು ಅನುಭವವಿರುದ್ಧವಾದದ್ದು. ಅಜ್ಞಾನಕಲ್ಪಿತವಾದ ವಸ್ತುವನ್ನು ಬಾಧಿಸಬಹುದಲ್ಲ ? ಮೂಲಾವಿದ್ಯೆಯೂ ಅಜ್ಞಾನಕಲ್ಪಿತವಾದದ್ದು. ಆದುದ ರಿಂದ ಜ್ಞಾನವು ಬಾಧಿಸಬಹುದಲ್ಲ ? ಎಂದು ಹೇಳಿದರೆ ಮೂಲಾವಿದ್ಯೆಯು ಕಲ್ಪನೆಗೆ ಉಪಾದಾನಕಾರಣ ಎಂದು ಹೇಳಿರುವದರಿಂದ ಕಲ್ಪಿತವಾಗುವದಿಲ್ಲ. ಕಲ್ಪಿತವಲ್ಲದ್ದರಿಂದ ಜ್ಞಾನಬಾಧ್ಯವಾಗುವದಿಲ್ಲ.

# ಅವಿದ್ಯಾ ಮಾಯಾ ವಿಚಾರ

ಅವಿದ್ಯಾ ಎಂದರೆ ಆತ್ಮನನ್ನು ದೇಹವನ್ನಾಗಿಯೂ ದೇಹವನ್ನು ಆತ್ಮನನ್ನಾಗಿಯೂ ತಿಳಿಯುವ ತಪ್ಪು ತಿಳಿವಳಿಕೆ. ಇದನ್ನು ಭಾಷ್ಯಕಾರರು ಅಧ್ಯಾಸ, ಮಿಥ್ಯಾಜ್ಞಾನ ಎಂದು ಕರೆದಿದ್ದಾರೆ.[1]

ಮಾಯೆಯೆಂದರೆ ಪ್ರಪಂಚಕ್ಕೆ ಉಪಾದಾನಕಾರಣವಾದ ಅವಿದ್ಯಾ ಕಲ್ಪಿತವಾದ, ಪ್ರಪಂಚ-ಬೀಜ-ವಸ್ತು [2]

ಸೂ. ಭಾ. 1-4-3. ಅವಿದ್ಯಾತ್ಮಿಕಾ ಹಿ ಬೀಜಶಕ್ತಿಃ

ಮಾಂ. ಕಾ. ಭಾ, 2-31. ಯಾ ಅಸದ್ವಸ್ತ್ವಾತ್ಮಿಕಾ ಸದ್ವಸ್ತ್ವಾತ್ಮಿ-ಕೇವ ಅವಭಾಸಮಾನಾ ಸಾ ಮಾಯಾ.

---

(1) ಸೂ. ಭಾ. 4-1-2 ನಹಿ ದೃಷ್ಟೇ ಅನುಪಪನ್ನಂ ನಾಮ.

(1) ತಮೇತಂ ಏವಂ ಲಕ್ಷಣಮಧ್ಯಾಸಂ ಪಂಡಿತಾ ಅವಿದ್ಯೇತಿ ಮನ್ಯನ್ತೇ

(1) ಬೃಹ. 1-4-10 ,, ,,

(2) ಸೂ. ಭಾ. 2-1-14 ಅವಿದ್ಯಾಕಲ್ಪಿತೇ ನಾಮರೂಪೇ ಸಂಸಾರ ಪ್ರಪಂಚ ಬೀಜ ಭೂತೇ ಸರ್ವಜ್ಞಸ್ಯೇಶ್ವರಸ್ಯ, ಮಾಯಾ, ಶಕ್ತಿಃ ಪ್ರಕೃತಿ ರಿ ತಿ ಚ ಶ್ರುತಿ ಸ್ಮೃತ್ಯೋ ರಭಿಲಪ್ಯೇತೇ ।

(2) ಸೂ. ಭಾ. 2-1-27 ಅವಿದ್ಯಾಕಲ್ಪಿತೇನ ನಾಮರೂಪ ಲಕ್ಷಣೇನ ರೂಪಭೇದೇನ ವ್ಯಾಕೃತಾವ್ಯಾಕೃತಾತ್ಮಕೇನ ॥

(2) ಸೂ. ಭಾ. 3-2-22 ಕಲ್ಪಿತರೂಪಪ್ರತ್ಯಾಖ್ಯಾನೇನ ಬ್ರಹ್ಮಣಃ ಸ್ವರೂಪಾವೇದನಮ್ ॥

ಮಾಂ. 4-58. ಸಾ ಚ-ಮಾಯಾ ನ ವಿದ್ಯತೇ, ಮಾಯೇತ್ಯ-ವಿದ್ಯಮಾನಸ್ಯಾಖ್ಯಾ।

ಇವೆರಡೂ ಒಂದಾಗುವದಿಲ್ಲ. ಒಂದು ಎಂದು ತಿಳಿಯುವದು ಭ್ರಾಂತಿ.

ಮಾಯಾ, ಮೂಲಾವಿದ್ಯಾ, ಅವಿದ್ಯಾ, ಶಕ್ತಿಃ = ಇವು ಪರ್ಯಾಯ ಪದಗಳು. ಮೂಲಾವಿದ್ಯೆಯು ಕಾರ್ಯವಾದದ್ದು ಅಧ್ಯಾಸರೂಪಾವಿದ್ಯಾ. ಎಂದು ಪಂಚಪಾದಿಕಾಕಾರರು ಹೇಳಿದ್ದಾರೆ.

ಭಾಷ್ಯಕಾರರು ಅವಿದ್ಯೆಯಿಂದ ಕಲ್ಪಿತವಾದದ್ದು ಮಾಯಾ ಎಂದು ಹೇಳಿದ್ದಾರೆ. ಇವರು ಅದಕ್ಕೆ ವಿರುದ್ಧವಾಗಿ ಮಾಯಾಕಾರ್ಯವಾದದ್ದು ಅಧ್ಯಾಸರೂಪಾವಿದ್ಯಾ ಎಂದು ಬರೆದಿದ್ದಾರೆ. ಆದ್ದರಿಂದ ಇದು ಭಾಷ್ಯ ವಾಕ್ಯಕ್ಕೆ ವಿರುದ್ಧವಾಯಿತು.

ಭಾಷ್ಯಕಾರರು ಅಧ್ಯಾಸವೆಂಬ ಅವಿದ್ಯೆಯನ್ನು ಅನಾದಿಯಾದದ್ದೆಂದು ಹೇಳಿದ್ದಾರೆ. ಇವರು ಅದಕ್ಕೆ ವಿರುದ್ಧವಾಗಿ ಮಾಯಾಜನ್ಯವಾದದ್ದೆಂದು ಹೇಳಿದ್ದಾರೆ.

# ಉಪಾಸನೆಯೂ ಜ್ಞಾನವೂ

**ಉಪಾಸನೆ ಎಂದರೆ ಮನಸ್ಸಿನ ಕ್ರಿಯೆಯು.** ಇದು ಪುರುಷ ತಂತ್ರವಾದದ್ದು.

ಉಪಾಸನಂ ನಾಮ ಯಥಾಶಾಸ್ತ್ರಂ ಉಪಾಸ್ಯಸ್ಯ
ಅರ್ಥಸ್ಯ ವಿಷಯೀಕರಣೇನ ಸಾಮೀಪ್ಯಂ
ಉಪಗಮ್ಯ ತೈಲಧಾರಾವತ್ ಸಮಾನಪ್ರತ್ಯಯ-
ಪ್ರವಾಹೇಣ ದೀರ್ಘಕಾಲಂ ಯದಾಸನಂ ತದುಪಾಸನಮ್ ॥

ಶಾಸ್ತ್ರದಲ್ಲಿ ಹೇಳಿರುವಂತೆ ಉಪಾಸ್ಯದೇವತೆಯನ್ನು ವಿಷಯಮಾಡಿ-ಕೊಳ್ಳುವದರಿಂದ ಸಮೀಪಸ್ಥನಾಗಿ ಎಣ್ಣೆಯ ಧಾರೆಯಂತೆ ಸಮಾನ ಪ್ರತ್ಯಯ-ಪ್ರವಾಹದಿಂದ ಬಹಳ ಹೊತ್ತು ಕೂತುಕೊಳ್ಳುವದಕ್ಕೆ ಉಪಾಸನೆ ಎಂದು ಹೆಸರು.

**ಜ್ಞಾನವೆಂದರೆ ವಸ್ತು ಇರುವಂತೆಯೇ ವಸ್ತುವನ್ನು ನೋಡಿ ತಿಳಿಯುವದು.** ಇದೂ ಮನಸ್ಸಿನ ವೃತ್ತಿಯು.

ಇದು ವಸ್ತುತಂತ್ರವಾದದ್ದು, ಪುರುಷಾಧೀನವಾದದ್ದಲ್ಲ.

ಉಪನಿಷತ್ತುಗಳಲ್ಲಿ ಉಪಾಸನೆ ಎಂಬ ಶಬ್ದವನ್ನು ಉಪಾಸನೆ ಮತ್ತು ಜ್ಞಾನ ಎಂಬ ಎರಡು ಅರ್ಥದಲ್ಲಿಯೂ ಉಪಯೋಗಿಸಿರುತ್ತದೆ. ಪುರುಷಾಧೀನವಾದದ್ದಾಗಿದ್ದರೆ ಉಪಾಸನೆ ಎಂಬ ಅರ್ಥವನ್ನೂ ವಸ್ತುತಂತ್ರವಾಗಿದ್ದರೆ ಜ್ಞಾನ ಎಂಬ ಅರ್ಥವನ್ನೂ ಹೇಳಬೇಕು.

ಗೀತಾ 12–1 ಏವಂ ಸತತಯುಕ್ತಾಯೇ ಭಕ್ತಾ ಸ್ತ್ವಾಂ ಪರ್ಯು ಪಾಸತೇ ॥ ಇಲ್ಲಿ ಉಪಾಸನೆಯೆಂದೇ ಅರ್ಥ. ಯೇತ್ವಕ್ಷರಮನಿರ್ದೇಶ್ಯಂ

ಅವ್ಯಕ್ತಂ ಪರ್ಯುಪಾಸತೇ ಎಂಬಲ್ಲಿ ಉಪಾಸತೇ ಎಂದು ಹೇಳಿದ್ದರೂ ಇದು ಜ್ಞಾನವೇ. ಇಲ್ಲಿ ವಸ್ತುತಂತ್ರವಾದದ್ದಾದರಿಂದ ಜ್ಞಾನವೆಂದು ಹೇಳಬೇಕು.

ಜ್ಞಾನ ಮತ್ತು ಉಪಾಸನೆ ಎರಡೂ ಮನೋ ವೃತ್ತಿಗಳೇ ಆಗಿರುವದರಿಂದ ಎರಡಕ್ಕೂ ಎರಡರ್ಥವನ್ನು ಹೇಳಿದ್ದಾರೆ. ನಾವು ಪ್ರಕರಣವನ್ನು ನೋಡಿ ವಸ್ತುತಂತ್ರವಾಗಿದ್ದರೆ ಜ್ಞಾನವೆಂತಲೂ ಪುರುಷತಂತ್ರವಾಗಿದ್ದರೆ ಉಪಾಸನೆ—ಎಂತಲೂ ಅರ್ಥವನ್ನು ಮಾಡಬೇಕು. ದ್ವೈತಿಗಳೂ ವಿಶಿಷ್ಟಾ-ದ್ವೈತಿಗಳೂ ಯೋ ಬ್ರಹ್ಮವೇದ ಬ್ರಹ್ಮೈವಭವತಿ ಎಂದು ವಸ್ತುತಂತ್ರವಾದ ಜ್ಞಾನವನ್ನು ಹೇಳಿರುವ ಕಡೆಯಲ್ಲಿಯೂ ಬ್ರಹ್ಮವನ್ನು ಉಪಾಸನೆ ಮಾಡುವದರಿಂದ ಮುಕ್ತನಾಗುತ್ತಾನೆ-ಎಂದು ಬ್ರಹ್ಮದ ; ಉಪಾಸನೆಯಿಂದಲೇ ಮುಕ್ತಿಯನ್ನು ಪಡೆಯುತ್ತಾನೆ—ಎಂಬರ್ಥವನ್ನು ಮಾಡುತ್ತಾರೆ. ಇದು ಸರಿಯಲ್ಲ. ಪುರುಷರತಂತ್ರವಾಗಿದ್ದರೆ ಮಾತ್ರ ಉಪಾಸನೆ ಎಂತಲೂ ವಸ್ತುತಂತ್ರವಾಗಿದ್ದರೆ ಜ್ಞಾನವೆಂತಲೂ ಪ್ರಕರಣವನ್ನು ನೋಡಿ ನಿಶ್ಚಯಿಸಬೇಕು. ಆತ್ಮಜ್ಞಾನವೆಂದರೆ ಆತ್ಮನು ಹೇಗೆ ಇದ್ದಾನೆಯೋ ಹಾಗೆ ಆತ್ಮ ಸ್ವರೂಪದಲ್ಲಿ ನಿಂತು ನೋಡಿ ಆತ್ಮನು ಅದ್ವಿತೀಯನು ಸ್ವಯಂಪ್ರಕಾಶಸ್ವರೂಪನು—ಎಂದು ತಿಳಿಯುವದು ಜ್ಞಾನ.[1]

---

(1) ಸೂ.ಭಾ. 4–1–10 ಪೂರ್ವಸಿದ್ಧ ಕರ್ತೃತ್ವ ಭೋಕ್ತೃತ್ವ ವಿಪರೀತಂ ಹಿ ತ್ರಿಷ್ವಪಿ ಕಾಲೇಷು ಅಕರ್ತಾ ಅಭೋಕ್ತಾ ಬ್ರಹ್ಮಾಹಮಸ್ಮಿ । ನೇತಃ ಪೂರ್ವಮಪಿ ಕರ್ತಾ ಭೋಕ್ತಾ ಚಾಹಮಾಸಂ । ನೇದಾನೀಂ ನಾಪಿಭವಿಷ್ಯತ್ಕಾಲೇ ಇತಿ ಬ್ರಹ್ಮವಿದವಗಚ್ಛತಿ ॥

# ಜಗತ್ಕಾರಣತ್ವವಿಚಾರ

ಜಗತ್ತು ಪರಮಾರ್ಥವಾಗಿದೆ—ಎಂದು ಹೇಳುವವರು ಜಗತ್ತಿಗೆ ಕಾರಣವನ್ನು ಹೇಳುವದು ನ್ಯಾಯವಾದದ್ದು. ಜಗತ್ತು ಬರಿಯ ಹುಸಿ ತೋರಿಕೆ ಪರಮಾರ್ಥವಾಗಿ ಇಲ್ಲ ಎಂದು ಹೇಳುವವರು ಏಕೆ ಜಗತ್ಕಾರಣವನ್ನು ಹೇಳಬೇಕು ? ಎಂಬ ಸಂಶಯ ಬಂದರೆ ಅದಕ್ಕೆ ಈ ಉತ್ತರವನ್ನು ಹೇಳಿದ್ದಾರೆ.

ಜಗತ್ತು ಹುಟ್ಟಿದೆ ಎಂಬುದು ಪ್ರತ್ಯಕ್ಷದಿಂದಲೇ ತಿಳಿದಿರುತ್ತದೆ. ಮತ್ತೆ ಏಕೆ ಶ್ರುತಿ "ಆತ್ಮನ ಆಕಾಶಃ ಸಂಭೂತಃ"–ಎಂದು ಮುಂತಾಗಿ ಹೇಳಿರುತ್ತದೆ? ಎಂದರೆ ಆಕಾಶಾದಿಗಳು ಹುಟ್ಟಿವೆ ಎಂಬುದು ಪ್ರತ್ಯಕ್ಷದಿಂದಲೇ ತಿಳಿದಿರುವದರಿಂದ ಮತ್ತೆ ಶ್ರುತಿಯೂ ಅದನ್ನೇ ಹೇಳಿದರೆ ತಿಳಿದಿದ್ದನ್ನೇ ತಿಳಿಸಿದರೆ ಪ್ರಮಾಣವಾಗುವದಿಲ್ಲವಲ್ಲ ? ಎಂದರೆ ಆಕಾಶವು ಹುಟ್ಟಿದೆ—ಎಂಬುದನ್ನು ಅನುವಾದ ಮಾಡಿಕೊಂಡು ಆತ್ಮನಿಂದ ಹುಟ್ಟಿದೆ ಎಂದು ತಿಳಿಯದೇ ಇದ್ದದ್ದನ್ನು ತಿಳಿಸುತ್ತದೆ. ಆತ್ಮನಿಂದ ಹುಟ್ಟಿದೆ ಎಂದರೆ ಆತ್ಮನ ಕಡೆಗೆ ತಿರುಗುತ್ತಾರೆ. ಆತ್ಮಜ್ಞಾನವಾದರೆ ಪ್ರಪಂಚ ಕಾಣುವದೇ ಇಲ್ಲ. ಆಗ ಕಾರಣವನ್ನು ಹೇಳಲೂ ಬೇಕಾಗಿಲ್ಲ. ಇಲ್ಲದಿದ್ದಕ್ಕೆ ಕಾರಣವನ್ನು ಹೇಳಬೇಕೆ ? ಇಲ್ಲ. ಆದುದರಿಂದ ಆತ್ಮನ ಕಡೆಗೆ ತಿರುಗಿಸುವದಕ್ಕೆ ಸೃಷ್ಟಿವಾಕ್ಯಗಳು ಬಂದಿವೆ ಎಂದು ತಿಳಿಯಬೇಕು.[1] ಮತ್ತು ಏಕತ್ವವನ್ನು ಹೇಳುವದಕ್ಕೆ ಬಂದಿವೆ ಎಂದು ತಿಳಿಯಬೇಕು.[2]

---

(1) ಸೂ. ಭಾ. 1–4–14 ದರ್ಶಯತಿ ಚ ಸೃಷ್ಟ್ಯಾದಿ ಪ್ರಪಂಚಸ್ಯ ಬ್ರಹ್ಮ ಪ್ರತಿಪತ್ತ್ಯರ್ಥತಾಮ್ ||

(2) ಸೂ. ಭಾ. 4–3–14 ಉತ್ಪತ್ತಿ ಶ್ರುತೀನಾಂ ಏಕತ್ವಪ್ರತಿಪಾದನಪರತ್ವಾತ್ |

"ಯತೋವಾ ಇಮಾನಿ ಭೂತಾನಿ ಜಾಯನ್ತೇ ಯೇನ ಜಾತಾನಿ ಜೀವನ್ತಿ । ಯತ್ಪ್ರಯನ್ತ್ಯಭಿ ಸಂವಿಶಂತಿ ತದ್ವಿಜಿಜ್ಞಾಸಸ್ವ ತದ್ಬ್ರಹ್ಮೇತಿ ||" ತೈ. 3–1. ಜಗತ್ತು ಬಹ್ಮದಿಂದ ಹುಟ್ಟಿದೆ ಎಂದು ಹೇಳಿರುತ್ತದೆ. ಬ್ರಹ್ಮ ವಾದರೋ ನಿರವಯುವಾದದ್ದು. ಆದುದರಿಂದಲೇ ನಿಷ್ಕ್ರಿಯುವಾದದ್ದು. ಬ್ರಹ್ಮದಲ್ಲಿ ವಿಕಾರವಾದ ಹೊರ್ತು ಉತ್ಪತ್ತಿ ಎಂಬ ಕ್ರಿಯೆ ಉಂಟಾಗುವದಿಲ್ಲ. ಬ್ರಹ್ಮವು ನಿರ್ವಿಕಾರಿ. ಇಂತಹ ಬ್ರಹ್ಮದಿಂದ ಜಗತ್ತು ಹುಟ್ಟಿತು ಎಂದರೆ ನಮಗೆ ಅರ್ಥವಾಗುವದಿಲ್ಲವೆಂದರೆ ಅದಕ್ಕೆ ಉತ್ತರ. ಅವಿದ್ಯೆಯಿಂದ ಬ್ರಹ್ಮ ದಲ್ಲಿ ಜಗತ್ತು ಕಲ್ಪಿತವಾಗಿದೆ—ಎಂದರ್ಥ. ಕಲ್ಪನೆಗೆ ಆಸ್ಪದವು ಬ್ರಹ್ಮವಾಗಿರು ವದರಿಂದ ಬ್ರಹ್ಮದಿಂದ ಹುಟ್ಟಿತು ಎಂದು ಹೇಳಿದೆ—ಎಂದು ತಿಳಿಯಬೇಕು. ನಿಜವಾಗಿ ಪ್ರಪಂಚವು ಇಲ್ಲದ್ದರಿಂದ ಅದಕ್ಕೆ ಕಾರಣವೂ ಬೇಕಿಲ್ಲ.

ಅವಿದ್ಯಾಕಲ್ಪಿತಮಾಯೆಯಿಂದ ಹುಟ್ಟಿತು ಅಂದರೂ ಅವಿದ್ಯೆಯಿಂದ ಹುಟ್ಟಿತು ಅಂದರೂ ಪ್ರಪಂಚವು ಹುಟ್ಟಿಲ್ಲ ಕಾರಣ ಬೇಕಿಲ್ಲ ಎಂದೇ ನಿಜ ವಾದ ಅರ್ಥ.

ಅವಿದ್ಯೆಯಿಂದ ಹುಟ್ಟಿತು ಅಂದರೆ ಹುಟ್ಟಿತು ಎಂದು ತಪ್ಪಾಗಿ ತಿಳಿದು ಕೊಂಡಿದ್ದೀಯೆ. ನಿಜವಾಗಿ ಹುಟ್ಟಿಲ್ಲ ಎಂದೇ ಅರ್ಥ.

ನಿಜವಾಗಿ ಪ್ರಪಂಚ ಹುಟ್ಟಿಲ್ಲ ಎಂಬುದಕ್ಕೆ ಪ್ರಮಾಣ ವಾಕ್ಯಗಳು—

(1) ಗೀತಾಭಾಷ್ಯದಲ್ಲಿ 13–26 ಕ್ಷೇತ್ರಂ ಚ ಮಾಯಾ ನಿರ್ಮಿತ ಹಸ್ತಿವತ್, ಸ್ವಪ್ನದೃಷ್ಟವಸ್ತುವತ್, ಗಂಧರ್ವನಗರಾದಿವತ್ ಅಸದೇವ ಸದಿವ ಅವಭಾಸತೇ ಎಂದು ಹೇಳಿರುತ್ತದೆ. ಕ್ಷೇತ್ರವೆಂಬ ಈ ಜಗತ್ತು ಮಾಯೆಯಿಂದ ಮಾಡಿದ ಆನೆಯಂತೆಯೂ, ಸ್ವಪ್ನದಲ್ಲಿ ನೋಡಿದ ವಸ್ತುವಿನಂತೆಯೂ, ಗಂಧರ್ವನಗರದಂತೆಯೂ ಇಲ್ಲದ್ದು ಇದ್ದಂತೆ ತೋರುತ್ತಿದೆ. ಪ್ರಪಂಚವು ಇಲ್ಲದ್ದಾದ್ದರಿಂದ ಕಾರಣ ಬೇಕಿಲ್ಲ ಎಂದು ಗೊತ್ತಾಗುತ್ತದೆ. ಆದುದರಿಂದ ಅವಿದ್ಯಾಕಲ್ಪಿತಮಾಯೆಯನ್ನು ಕಾರಣವನ್ನಾಗಿ ಹೇಳಿದ್ದಾರೆ. ಅವಿದ್ಯೆಯಿಂದ ಕಲ್ಪಿತವಾದ ಮಾಯೆಯು ಕಾರಣವೆಂದರೂ ಕಾರಣವು ಇಲ್ಲದ್ದು, ಕಾರ್ಯವು ಇಲ್ಲದ್ದು ಎಂದರೂ ಒಂದೇ ಅರ್ಥ ‖ ಭ್ರಾಂತಿಯಿಂದ ಕಲ್ಪಿತವಾ ದದ್ದು ಯಾವದೂ ಪರಮಾರ್ಥವಾಗಿ ಇರುವದಲ್ಲ.

# ದೃಗ್‌ದೃಶ್ಯವಿವೇಕ

ದೃಕ್ ಎಂದರೆ ತನ್ನನ್ನೂ ದೇಹಾದಿಗಳನ್ನೂ ತಿಳಿಯುವವನು ಎಂದರ್ಥ (ಸಬ್ಜೆಕ್ಟ್). ದೃಶ್ಯವೆಂದರೆ ವಿಷಯಗಳು. (ಆಬ್ಜೆಕ್) ದೃಶ್ಯವು ತನ್ನನ್ನೂ ಅನ್ಯರನ್ನೂ ತಿಳಿಯಲಾರದು. ಉದಾಹರಣೆಗೆ ದೇಹವು "ನಾನು ದೇಹ" ಎಂದು ತಿಳಿಯಲಾರದು. ಇನ್ನೊಂದನ್ನೂ ತಿಳಿಯಲಾರದು. ದೃಶ್ಯವೆಲ್ಲವೂ ಜಡವು,ದೃಕ್ ಎಂದರೆ ಎಲ್ಲವನ್ನೂ ತಿಳಿಯುವದು, ಶುದ್ಧ ಚೈತನ್ಯವು. ದೃಕ್ಕಾದ ಶುದ್ಧ ಚೈತನ್ಯವೂ ಜಡವಾದ ದೇಹವೂ ಒಂದಾಗುವದಿಲ್ಲ. ಒಂದಾಗದೇ ಇರುವ ಚೈತನ್ಯವನ್ನೂ ಜಡವಾದ ದೇಹವನ್ನೂ ಒಂದಾಗಿ ತಿಳಿಯುವದೇ ಅಜ್ಞಾನ. ಜಡವಾದ, ಅನಿತ್ಯವಾದ, ವಿಷಯವಾದ ಶರೀರವನ್ನೂ ಇಂದ್ರಿಯಗಳನ್ನೂ ನಾನು ನನ್ನವು ಎಂದು ತಿಳಿಯುವದೇ ಅವಿದ್ಯಾ. ಅಚೇತನವಾದ ಸಾವಯವವಾದ, ಅನಿತ್ಯವಾದ ಮತ್ತು ವಿಷಯವಾದ ದೇಹವು ನಾನಲ್ಲ. ಚೇತನನಾದ ಆತ್ಮನು ದೇಹವಲ್ಲ ಎಂದು ಆತ್ಮಾನಾತ್ಮಗಳ ವಿವೇಕವನ್ನುಯಾವನು ಮಾಡಿಕೊಂಡು ತನ್ನ ನಿಜವಾದ ಸ್ವರೂಪಜ್ಞಾನದಿಂದ "ನಾನು ದೇಹ, ನನ್ನವು ಇಂದ್ರಿಯಗಳು" ಎಂಬ ತಪ್ಪು ತಿಳಿವಳಿಕೆಯನ್ನು ಕಳೆದುಕೊಂಡು ತನ್ನ ಚೈತನ್ಯಸ್ವರೂಪದಲ್ಲಿ ತಾನು ನಿಲ್ಲುವದೇ ಅಂದರೆ ಸ್ವಸ್ವರೂಪಾವಸ್ಥಾನವೇ ಮೋಕ್ಷ. "ಆಗ ಅವನಿಗೆ ಕ್ಷೇತ್ರಜ್ಞಂಚಾಪಿಮಾಂವಿದ್ಧಿ" ಎಂಬ ಭಗವಂತನ ವಚನದ ಅರ್ಥವು ಗೊತ್ತಾಗುತ್ತದೆ. ಅಂದರೆ ಇದುವರೆಗೆ ನಾನು ಶರೀರೇಂದ್ರಿಯಸಂಘಾತದಿಂದ ಕೂಡಿದವನು ಎಂದು ತಿಳಿದು ಜೀವ ಎಂದು ಎನ್ನಿಸಿಕೊಂಡಿದ್ದೆ. ಈಗ ಶರೀರೇಂದ್ರಿಯಗಳು ವಿಷಯಗಳು ಜಡವಾದವುಗಳು ಅನಿತ್ಯವಾದವುಗಳು. ಇವು ನಾನಾಗುವುದಿಲ್ಲ. ನಾನು ಶುದ್ಧ ಚಿನ್ಮಾತ್ರಸ್ವರೂಪನು—ಎಂಬ ಅನುಭವರೂಪವಾದ ಜ್ಞಾನದಿಂದ ಆಭ್ರಾಂತಿಯನ್ನು ಕಳೆದುಕೊಂಡದ್ದರಿಂದ ನಾನು ಮುಕ್ತನಾದೆನು ಬ್ರಹ್ಮನಾದೆನು. ಎಂಬ ಅನುಭವವನ್ನು ಪಡೆಯುತ್ತಾನೆ. ಇಲ್ಲಿ ಬ್ರಹ್ಮನಾ-

---

ಗೀ. ಭಾ. 13–2. ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷುಭಾರತ.

ದೆನು ಎಂದರೂ ಒಂದೇ ಬ್ರಹ್ಮನನ್ನು ತಿಳಿದುಕೊಂಡೆನು ಎಂದರೂ ಒಂದೇ. ಬ್ರಹ್ಮನು ಮೊದಲೇ ಆಗಿದ್ದನು ತಿಳಿದಿರಲಿಲ್ಲ ಈಗ ತಿಳಿದುಕೊಂಡನು ಎಂದೇ ಅರ್ಥ.

# ಸತ್ತಾತ್ರೈವಿಧ್ಯವಿಚಾರ

ಪಂಚಪಾದಿಕಾಕಾರರೇ ಮೊದಲಾದ ವ್ಯಾಖ್ಯಾನಕಾರರು
ಪರಬ್ರಹ್ಮನಿಗೆ—ಪಾರಮಾರ್ಥಿಕ ಸತ್ತಾ
ಪ್ರಪಂಚಕ್ಕೆ — ವ್ಯಾವಹಾರಿಕ ಸತ್ತಾ
ಶುಕ್ತಿರಜತಾದಿಗಳಿಗೆ — ಪ್ರಾತಿಭಾಸಿಕಸತ್ತಾ
ಎಂದು ಮೂರು ಸತ್ತೆಗಳನ್ನು ಹೇಳಿದ್ದಾರೆ.

ಕೆಲವರು ಪ್ರಪಂಚವು ವ್ಯವಹಾರ ಇರುವವರೆಗೂ ಇದ್ದರೆ ಸಾಕು. ವ್ಯವಹಾರ ಹೋದ ಮೇಲೆ ಪ್ರಪಂಚವೂ ಹೋಗಲಿ. ನಾವು ವ್ಯವಹಾರ ಮಾಡುತ್ತ ಇರುವವರೆಗೆ ಇದ್ದರೆ ಸಾಕು. ಆದುದರಿಂದ ಚೆನ್ನಾಗಿ ದುಡಿದು ಸಂಪಾದಿಸಬೇಕು. ಭೋಗಿಸಬೇಕು. ಎಂದು ಮುಂತಾಗಿ ಹೇಳುತ್ತಾರೆ. ಇವರಿಗೆ ಪ್ರಪಂಚಕ್ಕೆವ್ಯಾವಹಾರಿಕಸತ್ತೆ ಇದೆ ಎಂದರೆ ಬಹಳ ಸಂತೋಷ.

ಆದರೆ ಶಂಕರಾಚಾರ್ಯರು ಮಾತ್ರ ಸೂ. ಭಾ. 2-1-16 ರಲ್ಲಿ ಏಕಂಚಪುನಃ ಸತ್ತ್ವಂ—ಎಂದು ಒಂದೇ ಸತ್ತೆಯನ್ನು ಹೇಳಿದ್ದಾರೆ.

ಮತ್ತು ಗೀ. ಭಾ. 13–26ರಲ್ಲಿ ಕ್ಷೇತ್ರಂಚ ಮಾಯಾನಿರ್ಮಿತಹಸ್ತಿವತ್ ಸ್ವಪ್ನದೃಷ್ಟವಸ್ತುವತ್ ಗಂಧರ್ವನಗರಾದಿವತ್ ಅಸದೇವ ಸದಿವ ಅವಭಾಸತೇ = ಕ್ಷೇತ್ರವು ಅಂದರೆ ವಿಷಯಭೂತವಾದ ಅನಾತ್ಮಪ್ರಪಂಚವು ಮಾಯೆಯಿಂದ ಮಾಡಿದ ಆನೆಯಂತೆಯೂ ಸ್ವಪ್ನದಲ್ಲಿ ನೋಡಿದ ವಸ್ತುವಿನಂತೆಯೂ ಗಂಧರ್ವನಗರದಂತೆಯೂ ಅಸತ್ತೆ ಆಗಿದ್ದರೂ ಇರುವದರಂತೆ ಪ್ರಕಾಶಿಸುತ್ತದೆ ಎಂದು ಬರೆದಿದ್ದಾರೆ. ಮಾಯಾನಿರ್ಮಿತ ಆನೆಗೂ, ಸ್ವಪ್ನದಲ್ಲಿ ನೋಡಿದ ವಸ್ತುವಿಗೂ ಗಂಧರ್ವನಗರಕ್ಕೂ ಯಾರಾದರೂ ವ್ಯಾವಹಾರಿಕ ಸತ್ಯತ್ವವನ್ನು ಹೇಳುತ್ತಾರೆಯೆ ? ಯಾರೂ ಹೇಳುವುದಿಲ್ಲ. ಹಾಗಾದರೆ ಪ್ರಪಂಚಕ್ಕೆ

ವ್ಯಾವಹಾರಿಕ ಸತ್ತೆ ಎಂಬುವನ್ನು ಹೇಳಲು ಸಾಧ್ಯವೆ? ಇಲ್ಲವಲ್ಲ. ಪ್ರಪಂಚಕ್ಕೆ ವ್ಯಾವಹಾರಿಕ ಸತ್ತೆ ಎಂಬುದು ಭಾಷ್ಯವಾಕ್ಯಕ್ಕೆ ವಿರುದ್ಧವಾಯಿತು. ಆದುದರಿಂದ ವ್ಯಾಖ್ಯಾನಕಾರರು ಹೇಳಿರುವಂತೆ ಮೂರು ಸತ್ತೆಗಳನ್ನು ಹೇಳುವದು ಸರಿಯಲ್ಲ. ಪ್ರಪಂಚಕ್ಕೆ ಸತ್ತೆ ಇಲ್ಲವೆಂದು ಹೇಳವರೆ ಅವರಲ್ಲಿ ವಿರಕ್ತಿಯನ್ನು ಹೇಳುವದು ಯುಕ್ತವಾಗುತ್ತದೆ.

# ಸಾಧನ ಸೋಪಾನ

ಯಾವದು ಸಾಧ್ಯವಾದುದೋ ಅದಕ್ಕೆ ಸಾಧನಬೇಕು. ಆತ್ಮನೋ ಸಿದ್ಧನು; ಪ್ರಸಿದ್ಧನು. ಪ್ರಸಿದ್ಧನು ಹೇಗೆಂದರೆ ಅಪರೋಕ್ಷನಾಗಿರುವದರಿಂದ.

ಪ್ರತ್ಯಕ್ಷವೆಂದರೆ ಇಂದ್ರಿಯಗಳಿಗೂ ವಿಷಯಗಳಿಗೂ ಸಂಬಂಧವಾಗಿ ಜ್ಞಾನವಾದರೆ ಪ್ರತ್ಯಕ್ಷವೆಂದಾಗುತ್ತದೆ.

ಇಂದ್ರಿಯಗಳಿಗೆ ಸಂಬಂಧಿಸದೇ ಆಗುವ ಜ್ಞಾನ ಪರೋಕ್ಷಜ್ಞಾನ.

ಇಂದ್ರಿಯಗಳಿಗಾಗಲೀ ಶಬ್ದಕ್ಕಾಗಲೀ ಸಿಕ್ಕದೇ ಇರುವ ತನ್ನನ್ನು ತಾನೇ ತಾನಾಗಿ ತನ್ನನ್ನು ತಿಳಿಯುವುದು ಅಪರೋಕ್ಷಜ್ಞಾನ.

ಹೀಗೆ ಆತ್ಮನು ಪ್ರಸಿದ್ಧನಾಗಿರುವದರಿಂದ ಸಾಧನ ಏತಕ್ಕೆ ಬೇಕು? ಎಂಬ ಶಂಕೆಯು ಬಂದರೆ ಇದಕ್ಕೆ ಉತ್ತರವಿದು:

ಒಬ್ಬ ತಂದೆಯು ತನ್ನ ಮಕ್ಕಳಿಗೆ "ಕಷ್ಟಕಾಲದಲ್ಲಿ ಉಪಯೋಗವಾಗಲಿ" ಎಂದು ಅಮೂಲ್ಯವಾದ ಗೋಲಿಯಂತಿರುವ ವಜ್ರವನ್ನು ಪೆಟ್ಟಿಗೆಯಲ್ಲಿಟ್ಟಿದ್ದನು. ಸಾಯುವ ಮುಂಚೆ ಹೇಳೋಣವೆಂದಿದ್ದನು. ಸಾಯುವ ಮುಂಚೆ ವಾಕ್ಕುನಿಂತುಹೋಯಿತು, ಅಂದರೆ ವಾಕ್ಕು ಮನಸ್ಸಿನಲ್ಲಿ ಸೇರಿತು. ಹೇಳಬೇಕೆಂದು ಮನಸ್ಸುಮಾಡುತ್ತಾನೆ ಹೇಳುವುದಕ್ಕೆ ಬಾಯಿಲ್ಲ. ಸತ್ತುಹೊದ. ಮಕ್ಕಳು ಪೆಟ್ಟಿಗೆಯನ್ನು ನೋಡಿ ಅಪ್ಪ ಎಂತಹ ಒಳ್ಳೆಯ ಗೋಲಿಯನ್ನಿಟ್ಟಿದ್ದಾನೆ! ಎಂದು ಅಂದುಕೊಂಡು. ಆಡುವುದಕ್ಕೆ ಗೋಲಿಯನ್ನಾಗಿ ಉಪಯೋಗಿಸಿದರು. ತಂದೆಯ ಔರ್ಧ್ವದೈಹಿಕ ಕರ್ಮಮಾಡಲು ದುಡ್ಡಿಲ್ಲ. ಅತ್ಯಂತ ಬಡವರಾಗಿದ್ದರು. ಒಂದಾನೊಂದು ದಿವಸ ಗೋಲಿಯಾಟದಲ್ಲಿ ಆ ವಜ್ರವನ್ನು ಗೋಲಿಯಾಗಿ ಉಪಯೋಗಿಸಿದ್ದರು. ಒಬ್ಬ ವಜ್ರಪರೀಕ್ಷಕನು ಅದನ್ನು ನೋಡಿ ಸಾವಿರಾರು ರೂಪಾಯಿಗಳನ್ನು ಕೊಡುತ್ತೇನೆ, ಆ ಗೋಲಿಯನ್ನು ನನಗೆ ಕೊಡು ಎಂದು ಕೇಳಿದನು. ಆ ಮಕ್ಕಳು

ಗೋಲಿಗೆ ಯಾರಾದರೂ ಸಾವಿರ ರೂಪಾಯಿಗಳನ್ನು ಕೊಡುತ್ತಾರೆಯೆ ? ಇಲ್ಲ. ಆದುದರಿಂದ ಇದು ಅಮೂಲ್ಯವಾದದ್ದಾಗಿರಬೇಕು—ಎಂದು ಚಿನ್ನ ಬೆಳ್ಳಿಯ ಅಂಗಡಿಗೆ ತೆಗೆದುಕೊಂಡು ಹೋಗಿ ಎಷ್ಟಕ್ಕೆ ಇದನ್ನು ತೆಗೆದುಕೊಳ್ಳುತ್ತೀರಿ ? ಎಂದು ಕೇಳಿದರು. ಅಂಗಡಿಯವರು ಪರೀಕ್ಷಿಸಿ ಅಮೂಲ್ಯರತ್ನವೆಂದು ತಿಳಿದು ಹತ್ತು ಸಾವಿರ ರೂಪಾಯಿಗಳಿಗೆ ತೆಗೆದುಕೊಳ್ಳುತ್ತೇವೆ. ಎಂದು ಹೇಳಿದರು. ಅವರಿಗೆ ಆಶೆಯು ಹೆಚ್ಚಿತು. ರತ್ನವ್ಯಾಪಾರದ ಅಂಗಡಿಗೆ ಹೋಗಿ ತೋರಿಸಿ ಎಷ್ಟಕ್ಕೆ ತೆಗೆದುಕೊಳ್ಳುತ್ತೀರೆಂದು ಕೇಳಿದರು. ಒಂದು ಲಕ್ಷ ರೂಪಾಯಿಗೆ ತೆಗೆದು ಕೊಳ್ಳುತ್ತೇವೆಂದು ಹೇಳಿದರು. ಆಗ ಅದನ್ನು ಕೊಟ್ಟು ಧನಿಕ ರಾದರು. ಮೊದಲೂ ಅದೇ ರತ್ನವಿತ್ತು. ಇದು ರತ್ನವೆಂದು ತಿಳಿಯದೆ, ಗೋಲಿಯನ್ನಾಗಿ ಮಾಡಿಕೊಂಡಿದ್ದರು. ರತ್ನವೆಂದು ತಿಳಿದಮೇಲೆ ಲಕ್ಷ ರೂಪಾಯಿಗೆ ಕೊಟ್ಟರು. ರತ್ನವು ಇದ್ದದ್ದು ಅವರಿಗೆ ಉಪಯೋಗಕರ ವಾಗಿರಲಿಲ್ಲ. ರತ್ನವೆಂದು ತಿಳಿದಮೇಲೆ ಉಪಯೋಗಕರವಾಯಿತು. ಹಾಗೆಯೇ ನಮ್ಮ ಸ್ವರೂಪಾವಸ್ಥಾನವು ಯಾವಾಗಲೂ ಇದ್ದೇ ಇದೆ ; ಆದರೆ ಅದು ನಮ್ಮ ಸ್ವರೂಪವು ಎಂದು ತಿಳಿಯದೇ ಜೀವತ್ವವೇ ನಮ್ಮ ಸ್ವರೂಪವೆಂದು ತಿಳಿದು ದುಃಖಗಳಿಗೆ ತುತ್ತಾಗಿದ್ದೇವೆ. ನಮ್ಮ ಸ್ವರೂಪವು ದೇಹಾದಿರೂಪವಲ್ಲ ಶುದ್ಧ ಸಚ್ಚಿದಾನಂದಸ್ವರೂಪವು ಎಂದು ಯಾವ ಕ್ಷಣದಲ್ಲಿ ತಿಳಿದು ಕೊಳ್ಳು ತ್ತಾರೆಯೋ ಆ ಕ್ಷಣದಲ್ಲಿಯೇ ಸಚ್ಚಿದಾನಂದ ಸ್ವರೂಪದವರಾಗುತ್ತಾರೆ, ಮುಕ್ತರಾಗುತ್ತಾರೆ.

ಆತ್ಮನು ಅಪರೋಕ್ಷನಾಗಿ ಪ್ರಸಿದ್ಧನಾಗಿ ಸಚ್ಚಿದಾನಂದ ಸ್ವರೂಪದವ ನಾಗಿದ್ದರೂ ನಾವು ಅದನ್ನು ತಿಳಿದುಕೊಳ್ಳದೇ ದೇಹಾದ್ಯುಪಾಧಿವಿಶಿಷ್ಟನನ್ನೇ ನಾವೆಂದು ತಿಳಿದು ನಾವು ಜೀವರು, ಕೈಲಿಸಾಗದವರು ಸುಖದುಃಖಾನುಭವಿ ಗಳು ಎಂದು ತಪ್ಪು ತಿಳಿವಳಿಕೆಯನ್ನು ಹೊಂದಿ ಸುಖಿದುಃಖಿಗಳಾಗಿದ್ದೇವೆ. ನಾವು ನಮ್ಮ ನಿಜವಾದ ಸಚ್ಚಿದಾನಂದಸ್ವರೂಪವನ್ನು ತಿಳಿದಿಲ್ಲ ; ಜೀವ ರೆಂದು ತಪ್ಪಾಗಿ ತಿಳಿದಿದ್ದೇವೆ,—ಎಂಬೀ ಮಿಥ್ಯಾಜ್ಞಾನವನ್ನು ಕಳೆದು ಕೊಳ್ಳಲು ಸಾಧನವು ಅವಶ್ಯಕವಾಗಿರುತ್ತದೆ. ಆದುದರಿಂದ ಸಾಧನಸೋಪಾನ ವನ್ನು ಹೇಳುತ್ತೇನೆ.

## ಮೊದಲನೆಯ ಸೋಪಾನವು.

ಶಾಸ್ತ್ರದಲ್ಲಿ ನಿಷಿದ್ಧಿಸಿರುವ ಸುಳ್ಳು ಹೇಳುವುದು, ಪರರಿಗೆ ಹಿಂಸೆ-ಕೊಡುವುದು, ಅಪಕಾರ ಮಾಡುವುದು, ಕಡಿಯುವುದು ಮತ್ತು ಸಾಧು ಸಂತರಿಗೂ ಸಂನ್ಯಾಸಿಗಳಿಗೂ ವೃಥಾ ತೊಂದರೆಯನ್ನು ಕೊಡುವುದು—ಇವೇ ಮೊದಲಾದವುಗಳನ್ನು ಮಾಡದೇ ಇರುವುದು. ದೊಡ್ಡವರು ಹೀಗೆ ಹೇಳಿದ್ದಾರೆ : "ಉಪಕಾರಾಕರಣೇಽಪಿ ಅಪಕಾರಾಕರಣಮೇವ ಮಹದುಪಕಾರಂ ಮನ್ಯಂತೇ ॥" ಎಂದು ಹೇಳಿದ್ದಾರೆ. ಉಪಕಾರವನ್ನು ಮಾಡದಿದ್ದರೂ ಅಪಕಾರವನ್ನು ಮಾಡದಿದ್ದರೆ ದೊಡ್ಡ ಉಪಕಾರವನ್ನಾಗಿ ಎಣಿಸುತ್ತಾರೆ, ಎಂದು ಹೇಳಿದ್ದಾರೆ.

ವಿವಾಹ ನಿಶ್ಚಯ ಸಮಯದಲ್ಲಿ ಒಂಟು ಸೀನು ಸೀನದಿದ್ದರೆ ವಿವಾಹ ಮಾಡಿಸಿದ ಪುಣ್ಯ ಬರುತ್ತದೆ—ಎಂದು ಕೆಲವರು ಹೇಳುತ್ತಾರೆ. ಒಟ್ಟಿನಲ್ಲಿ ಮತ್ತೊಬ್ಬರಿಗೆ ತೊಂದರೆ ಕೊಡದಿದ್ದರೆ ಸಾಕು. ಇದನ್ನೇ ದೊಡ್ಡ ಉಪಕಾರವನ್ನಾಗಿ ತಿಳಿಯುತ್ತಾರೆ.

## ಎರಡನೆಯ ಸೋಪಾನ. ವಿಹಿತ ಕರ್ಮಾನುಷ್ಠಾನ.

ಶಾಸ್ತ್ರದಲ್ಲಿ ಮಾಡಬೇಕೆಂದು ವಿಧಿಸಿರುವ ಕರ್ಮಗಳನ್ನು ಮಾಡುವುದು. ಸತ್ಯವನ್ನು ಹೇಳು. ಧರ್ಮವನ್ನು ಆಚರಿಸು. ದಾನವನ್ನು ಮಾಡು. ಪರೋ-ಕಾರವನ್ನು ಮಾಡು. ಎಂದು ಮುಂತಾಗಿ ಹೇಳಿರುವ ಕರ್ಮಗಳನ್ನೂ ಆಯಾ ವರ್ಣದವರಿಗೆ ಹೇಳಿರುವ ಸ್ನಾನ ಸಂಧ್ಯಾಕರ್ಮಗಳನ್ನೂ ಮಾಡುವುದು.

## ಮೂರನೆಯ ಸೋಪಾನ ಕರ್ಮಯೋಗ

ಬ್ರಹ್ಮಣ್ಯಾಧಾಯಕರ್ಮಾಣಿ ಸಂಗಂತ್ಯಕ್ತ್ವಾ ಕರೋತಿ ಯಃ ।

5–30 ಭ. ಗೀ. ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥

ಯಾವನು ಈ ಕೆಲಸವನ್ನು ನಾನಲ್ಲದೇ ಇನ್ನು ಯಾರು ಮಾಡಿಯಾರು ? ಎಂಬ ಕರ್ಮಸಂಗವನ್ನೂ ನಾನೇ ಈ ಕೆಲಸವನ್ನು ಮಾಡಬೇಕು ಎಂಬ-ಕರ್ತೃತ್ವ ಸಂಗವನ್ನೂ ಈ ಫಲಕ್ಕಾಗಿ ಮಾಡುತ್ತೇನೆ. ಎಂಬ ಫಲಸಂಗವನ್ನೂ ಬಿಟ್ಟು ಪರಮಾತ್ಮನ ಕರ್ಮ ಪರಮಾತ್ಮನು ಹೇಳಿದ್ದಾನೆ. ಅದರಂತೆ ಮಾಡುತ್ತೇನೆ. ಎಂದು ಪರಮಾತ್ಮನಿಗೆ ಅರ್ಪಿಸಿ ವಿಹಿತ ಕರ್ಮಗಳನ್ನು ಮಾಡುವುದು. ಹಾಗೆ ಮಾಡಿದರೆ ಕಮಲದ ಎಲೆ ನೀರಿನಲ್ಲಿಯೇ ಇದ್ದರೂ ನೀರಿನ ಸಂಬಂಧವನ್ನು ಹೊಂದದೇ ಇರುವಂತೆ ಮಾಡಿದ ಕರ್ಮ ಬಂಧಕವಾಗುವುದಿಲ್ಲ.

ಮಾಡತಕ್ಕ ಸಕಲ ಕರ್ಮಗಳನ್ನು ಪರಮಾತ್ಮನ ಕರ್ಮಗಳನ್ನಾಗಿ ತಿಳಿದು, ಅವನು ಹೇಳಿದ್ದಾನೆ. ಅದರಂತೆ ಮಾಡುತ್ತೇನೆ. ಎಂದು ಕರ್ಮಗಳನ್ನೇ ಭಗವಂತನಿಗೆ ಅರ್ಪಿಸುವುದು.

ಭ. ಗೀ. ಅಭ್ಯಾಸೇಽಪ್ಯಸಮರ್ಥೋಽಸಿ ಮತ್ಕರ್ಮಪರಮೋ ಭವ ।

ಭ.ಗೀ. 12–10 ಮದರ್ಥಮಪಿ ಕರ್ಮಾಣಿ ಕುರ್ವನ್ ಸಿದ್ಧಿಮವಾಪ್ಸ್ಯಸಿ ॥

ಇದಕ್ಕೆ ಕರ್ಮಯೋಗವೆಂದು ಹೆಸರು.

## ನಾಲ್ಕನೆಯ ಸೋಪಾನ ಧ್ಯಾನಯೋಗ.

ಯಾವಾಗ ಕರ್ಮಗಳನ್ನು ಪರಮಾತ್ಮನಿಗೆ ಅರ್ಪಿಸುತ್ತಾನೆಯೋ ಆ ಕೂಡಲೇ ಪರಮಾತ್ಮನಲ್ಲಿ ಸಂಬಂಧವನ್ನು ಪಡೆಯುತ್ತಾನೆ. ಪರಮಾತ್ಮನು ಆನಂದ ಸ್ವರೂಪನಾಗಿರುವುದರಿಂದ ಅವನಲ್ಲಿ ಅಭಿರುಚಿ ಹುಟ್ಟಿ ಪರಮಾತ್ಮನನ್ನು ಧ್ಯಾನ ಮಾಡಲು ಪ್ರಾರಂಭಿಸುತ್ತಾನೆ. ಧ್ಯಾನವನ್ನು ಮಾಡುತ್ತ ಮಾಡುತ್ತ ಧ್ಯೇಯೈಕನಿಷ್ಠನಾದರೆ ಆಗಕರ್ಮ ತಾನಾಗಿಯೇ ಬಿಟ್ಟು ಹೋಗುತ್ತದೆ.

ಭ. ಗೀ. ಆರುರುಕ್ಷೋರ್ಮುನೇರ್ಯೋಗಂ ಕರ್ಮಕಾರಣಮುಚ್ಯತೇ ।

6–3 ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥

ಧ್ಯಾನವನ್ನು ಪ್ರಾರಂಭಿಸುವವನು ನಾನು ಪರಮಾತ್ಮನನ್ನು ಧ್ಯಾನ ಮಾಡುತ್ತೇನೆ–ಎಂದು ತಿಳಿದಿರುವುದರಿಂದ ದೇಹಾದಿಗಳಲ್ಲಿ ನಾನು ಎಂಬುದು ಇದ್ದೇ ಇರುತ್ತದೆ. ಇದು ಇರುವವರೆಗೆ ಶಾಸ್ತ್ರೋಕ್ತಕರ್ಮಗಳನ್ನು ಮಾಡಿ ಬಾಕಿಯಕಾಲದಲ್ಲಿ ಧ್ಯಾನವನ್ನು ಮಾಡಬೇಕು. ಧ್ಯೇಯೈಕನಿಷ್ಠನಾದರೆ ನಾನು ಎಂಬುದು ಇರುವುದಿಲ್ಲವಾದುದರಿಂದ ಕರ್ಮ ತಾನಾಗಿಯೇ ಬಿಟ್ಟು ಹೋಗುತ್ತದೆ.

## ಐದನೆಯ ಸೋಪಾನ ಉಪಾಸನಾ.

ಉಪಾಸನೆ ಎಂದರೆ ಶಾಸ್ತ್ರದಲ್ಲಿ ಹೇಳಿದಂತೆ ಉಪಾಸ್ಯ ದೇವತೆಯನ್ನು ವಿಷಯ ಮಾಡಿಕೊಂಡು ಅದರ ಸಮೀಪವನ್ನು ಹೊಂದಿ ಎಣ್ಣೆಯ ಧಾರೆ-ಯಂತೆ ಸ್ವಜಾತೀಯ ಪ್ರತ್ಯಯವೇ ಪ್ರವಾಹ ಹರಿದಂತೆ ಹರಿಯುವುದು ವಿಜಾತಿಯ ಪ್ರತ್ಯಯ ಬರಬಾರದು.

## ಆರನೆಯ ಸೋಪಾನ ಭಕ್ತಿ.

ಭಕ್ತಿ ಎಂದರೆ ಪರಮಾತ್ಮನಲ್ಲಿ, ಗುರುಗಳಲ್ಲಿ ಇಟ್ಟಿರುವ ಪ್ರೇಮ. ಪ್ರೇಮವು ಮನುಷ್ಯನಿಗೆ ಸಹಜವಾದ ಗುಣವು. ಆದರೆ ಅದನ್ನು ಇಡ-ಬಾರದ ವಿಷಯಗಳಲ್ಲಿ ಅಂದರೆ ಹೆಂಡತಿ, ಮಗ, ಮನೆ, ತೋಟ, ದುಡ್ಡು ಮುಂತಾದ ವಿಷಯಗಳಲ್ಲಿಟ್ಟಿರುತ್ತೇವೆ. ಇವುಗಳಲ್ಲಿಟ್ಟಪ್ರೇಮಕ್ಕೆ ಕಾಮ ಎಂದು ಹೆಸರು.

ಇದೇ ಪ್ರೇಮವನ್ನು ಪರಮಾತ್ಮನಲ್ಲಿ ಗುರುಗಳಲ್ಲಿ ಇಟ್ಟರೆ ಇದೇ ಭಕ್ತಿ ಎಂದು ಎನ್ನಿಸಿಕೊಳ್ಳುತ್ತದೆ.

ಪ್ರಹ್ಲಾದನು ನರಸಿಹ್ಮನನ್ನು ಬೇಡಿಕೊಂಡದ್ದು ಏನೆಂದರೆ, ಅವಿವೇಕಿ

ಗಳು ವಿಷಯಗಳಲ್ಲಿ ಯಾವ ಸ್ಥಿರವಾದ ಪ್ರೀತಿಯನ್ನಿಟ್ಟಿರುತ್ತಾರೆಯೋ ಆ ಸ್ಥಿರವಾದ ಪ್ರೀತಿಯು ನಿನ್ನನ್ನು ಧ್ಯಾನ ಮಾಡುವ ನನ್ನ ಹೃದಯದಿಂದ ಹೊರಕ್ಕೆ ಹೋಗಬಾರದು. ಅಂದರೆ, ನಿನ್ನಲ್ಲಿಯೇ ಪ್ರೀತಿಯು ನನಗೆ ಸ್ಥಿರವಾಗಿರಲಿ ಎಂದು ಪ್ರಹ್ಲಾದನು ಕೇಳಿಕೊಂಡಿರುತ್ತಾನೆ.

ನಾರದ ಭಕ್ತಿ ಸೂತ್ರ.

ಸಾತ್ವಸ್ಮಿನ್ ಪರಮಪ್ರೇಮರೂಪಾ

ಆ ಭಕ್ತಿಯು ಪರಮಾತ್ಮನಲ್ಲಿಟ್ಟ ಪರಮಪ್ರೇಮರೂಪವಾದದ್ದು—

ಭಾಗವತ : ಯಾಪ್ರೀತಿರವಿವೇಕಾನಾಂವಿಷಯೇಷ್ವನಪಾಯಿನೀ ।
ಸ್ಕಂದ 7. ತ್ವಾಮನುಸ್ಮರತಸ್ಸಾ ಮೇ ಹೃದಯಾನ್ಮಾಪಸರ್ಪತು ॥

## ಏಳನೆಯ ಸೋಪಾನ : ಪ್ರಪತ್ತಿ

ಪ್ರಪತ್ತಿಯೆಂದರೆ ತನ್ನನ್ನೇ ಪರಮಾತ್ಮನಿಗೆ ಅರ್ಪಿಸುವುದು.

ವಾಲ್ಮೀಕಿ ರಾಮಾಯಣ : ಸಕೃದೇವಪ್ರಪನ್ನಾಯ ತವಾಸ್ಮೀತಿ ಚ ಯಾಚತೇ।
ಯುದ್ಧಕಾಂಡ. ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥

ರಾಮಚಂದ್ರನು "ಒಂದಾವೃತ್ತಿ ಯಾರು ತಮ್ಮನ್ನೇ ನನಗೆ ಒಪ್ಪಿಸುತ್ತಾರೆಯೋ ಅವರಿಗೆ ನಾನು ಅಭಯವನ್ನು ನಿಯಮವಾಗಿ ತಪ್ಪದೇ ಕೊಡುತ್ತೇನೆ"—ಎಂದು ಹೇಳಿದ್ದಾನೆ.

ಹೀಗೆ ಪರಮಾತ್ಮನಿಗೆ ತನ್ನ ವ್ಯಕ್ತಿತ್ವವನ್ನೇ ಸಮರ್ಪಿಸುವುದು ಪ್ರಪತ್ತಿ.

## ಎಂಟನೆಯ ಸೋಪಾನ ಆತ್ಮಾನಾತ್ಮವಿವೇಕಃ !!

ಆತ್ಮಾ ಅಂದರೆ ಚೇತನನು. ತನ್ನನ್ನೂ ಇತರರನ್ನೂ ತಿಳಿಯತಕ್ಕವನು.

ಅನಾತ್ಮವೆಂದರೆ ಯಾವುದು ತನ್ನನ್ನೇ ತಿಳಿಯಲಾರದೋ ಅದು ಮತ್ತೊಬ್ಬ-ರನ್ನು ಹೇಗೆ ತಿಳಿಯುತ್ತದೆ? ಆದುದರಿಂದ ಶರೀರೇಂದ್ರಿಯಾದಿಗಳು ಜಡ ಪದಾರ್ಥಗಳು ನಾನು ಚೇತನನು, ನನ್ನನ್ನೂ ಮತ್ತೊಬ್ಬರನ್ನೂ ತಿಳಿಯುತಕ್ಕವನು. ಆದ್ದರಿಂದ ಇವೆರಡೂ ಒಂದಾಗುವುದಿಲ್ಲ. ಇವೆರಡೂ ಒಂದು ಎಂದು ತಿಳಿಯುವುದೇ ಭ್ರಾಂತಿಯು. ಇದೇ ಅವಿದ್ಯೆಯು ಎಂದು ಅನಾತ್ಮವಾದ ಶರೀರಾದಿಗಳಿಂದ ಆತ್ಮನನ್ನು ಭಿನ್ನನನ್ನಾಗಿ ತಿಳಿಯುವುದೇ ಆತ್ಮನಾತ್ಮ–ವಿವೇಕವು.

ಒಂಭತ್ತನೆಯ ಸೋಪಾನ : ಇಹಪರಲೋಕಗಳ ಫಲಭೋಗವಿರಾಗ :

ಇಹಾಮುತ್ರಾರ್ಥಫಲಭೋಗವಿರಾಗಃ
ಇಹಲೋಕದ ಪರಲೋಕದ ಸುಖಾನುಭವದಲ್ಲಿ ವೈರಾಗ್ಯವು.
ಶಮದಮಾದಿ ಸಾಧನ ಸಂಪತ್ತು.
ಶಮ ಎಂದರೆ ಮನೋನಿಗ್ರಹ, ದಮ ಎಂದರೆ ಬಹಿರಿಂದ್ರಿಯ ನಿಗ್ರಹ,
ಉಪರತಿಃ ಕರ್ಮಗಳಿಂದ ಹಿಮ್ಮೆಟ್ಟುವದು ಶ್ರದ್ಧಾ ನಂಬಿಕೆ.
**ಮುಮುಕ್ಷುತ್ವಂಚ**=ಮೋಕ್ಷವನ್ನು ಪಡೆಯಬೇಕೆಂಬ ಇಚ್ಛೆ.

ಹತ್ತನೆಯ ಸೋಪಾನ. (a) ಅಂತರಂಗಸಾಧನಗಳು ಶಮಾದಮಾದಿಗಳೂ, ಶ್ರವಣ ಮನನ ನಿದಿಧ್ಯಾಸನಗಳೂ, ಅಮಾನಿತ್ವಾದಿಗಳೂ.

ಹತ್ತನೆಯ ಸೋಪಾನ. (b) ಬ್ರಹ್ಮಜಿಜ್ಞಾಸಾ

ವೇದಾದಿಗಳ ಮೂಲಕ ಬ್ರಹ್ಮ ವಿಚಾರವನ್ನೇ ಮಾಡುವದು. ಸಾಧನಗಳನ್ನು ಅಳವಡಿಸಿಕೊಂಡು ಬ್ರಹ್ಮವಿಚಾರವನ್ನೇ ಮಾಡಿದರೆ ತನ್ನ ನಿಜವಾದ ಸ್ವರೂಪವೇ ಬ್ರಹ್ಮಸ್ವರೂಪ ಎಂಬುದನ್ನು ತಿಳಿದು ತನ್ನ ನಿಜ ಸ್ವರೂಪದಲ್ಲಿ ನಿಲ್ಲುವುದೇ ಮುಕ್ತಿ. ಇದೇ ಶಂಕರ ಸಿದ್ಧಾಂತ.

||ಸ್ವಸ್ತ್ಯಸ್ತು||

# ಪರಿಶಿಷ್ಟ

# ಉಪಕಾರ ಸ್ಮರಣೆ

ಬೋಧಾಯನಸಂಧ್ಯಾ, ಬೋಧಾಯನ ಶ್ರಾದ್ಧಮಂತ್ರ ಮತ್ತು ಶಂಕರ ಸಿದ್ಧಾಂತ (ಸಂಸ್ಕೃತ ಮತ್ತು ಕನ್ನಡ) ಪುಸ್ತಕಗಳನ್ನು ಅಚ್ಚು ಹಾಕಿಸುವ ಖರ್ಚಿಗೆ ಪಾದಪೂಜೆಯ ರೂಪದಿಂದಲೂ, ಕಾಣಿಕೆಯ ರೂಪದಿಂದಲೂ ದ್ರವ್ಯ ಸಹಾಯಮಾಡಿದ ಕೆಳಗೆ ನಮೂದಿಸಿರುವ ಮಹನೀಯರಿಗೆಲ್ಲರಿಗೂ ಸರ್ವಜ್ಞನೂ ಸರ್ವಶಕ್ತನೂ ಆದ ಪರಮಾತ್ಮನು ಶ್ರೇಯಸ್ಸನ್ನುಂಟುಮಾಡಲೆಂದು ನಾರಾಯಣ ಸ್ಮರಣೆಯನ್ನು ಮಾಡುತ್ತೇನೆ.

**ಶ್ರೀ ಜ್ಞಾನಾನಂದೇಂದ್ರಸರಸ್ವತೀ ಸ್ವಾಮೀಜಿ**

ಶ್ರೀ ಶ್ರೀ ಶೃಂಗೇರಿ ಕೂಡ್ಲಿ ಸಂಸ್ಥಾನಾಧೀಶ್ವರರಾದ ಪರಮಹಂಸಪರಿವ್ರಾಜ-ಕಾಚಾರ್ಯವರ್ಯರಾದ ಶ್ರೀ ಸಚ್ಚಿದಾನಂದವಾಲುಕೇಶ್ವರಭಾರತೀಸ್ವಾಮಿಗಳು ಮತ್ತು ಶ್ರೀ ವಿದ್ಯಾಭಿನವನರಸಿಂಹಭಾರತೀಸ್ವಾಮಿಗಳು.

ಶ್ರೀಯುತರುಗಳಾದ—

**ಕಲ್ಕತ್ತ**

ವೈ. ವಿ. ಅಶ್ವತ್ಥನಾರಾಯಣರು

**ವಿಶಾಖಪಟ್ಟಣ**

ವೈ. ವಿ. ಶಂಕರನಾರಾಯಣರು

**ಸಕ್ಕರೆಪಟ್ಟಣ**

ವೇ|| ಬ್ರ|| ಶ್ರೀ ನಾಗಭೂಷಣಭಟ್ಟರು

ವೇ|| ಬ್ರ|| ಶ್ರೀ|| ರಾಮಸ್ವಾಮಿಶಾಸ್ತ್ರಿಗಳು

ಸಕ್ಕರೆಪಟ್ಟಣ (ಮುಂದುವರಿದುದು)

ಶ್ರೀಯುತರುಗಳಾದ—

ವೇ|| ಬ್ರ|| ಶ್ರೀ ಶಂಕರಭಟ್ಟರು
ನಾಯಕ ಸೀತಾರಾಮಯ್ಯನವರು
ಎಸ್. ರಾಮಸ್ವಾಮಿಗಳು
ಕೆ. ಎಸ್. ವೆಂಕಟಾಚಲಯ್ಯನವರು
ಕೆ. ವಿ. ಚಂದ್ರಮೌಳಿಯವರು
ಜೆ. ಎಸ್. ಕೃಷ್ಣಮೂರ್ತಿಗಳು
ಬಿ. ಎ. ಕೃಷ್ಣಮೂರ್ತಿಗಳು
ನಾರಾಯಣಮೂರ್ತಿಗಳು
ಎಸ್. ನರಹರಿಯವರು
ಎಸ್. ವಿಶ್ವೇಶ್ವರಯ್ಯನವರು
ಬಿ. ಸೀತಾರಾಮಯ್ಯನವರು
ಕೇಶವಮೂರ್ತಿಗಳು
ಎಸ್. ಕೃಷ್ಣಪ್ಪನವರು
ಎಸ್. ಶಂಕರಯ್ಯನವರು
ಎಸ್. ಟಿ. ಸೀತಾರಾಮಯ್ಯನವರು
ಕೆ. ಎಸ್. ವೆಂಕಟೇಶಯ್ಯನವರು
ನರಸಿಂಹಭಟ್ಟರು
ನಾರಣಪ್ಪನವರು
ಹೆಚ್. ವೆಂಕಟಸುಬ್ಬಯ್ಯನವರು
ಹೆಚ್. ಎಸ್. ಶ್ರೀನಿವಾಸಮೂರ್ತಿಗಳು
ಬಿ. ಶ್ಯಾಮಣ್ಣನವರು
ಬಿ. ಬಂದಯ್ಯನವರು
ಕಾವಲು ನಂಜೇಗೌಡರು
ಬಸಪ್ಪನವರು

ಶ್ರೀಯುತರುಗಳಾದ—

ಕಡೂರು ಯೋಗಾನರಸಿಂಹರವರು
ಕಡೂರು ಶ್ರೀಕಂಠಯ್ಯನವರು
ಕಡೂರು ಗುಂಡಪ್ಪನವರು
ಎಸ್. ಸಿ. ನಾರಣಪ್ಪನವರು

## ಮೈಸೂರು

ಅಧ್ಯಾತ್ಮ ವಿದ್ಯಾ ಪ್ರಚಾರಸಂಘದವರು
ವೇ|| ಬ್ರ|| ಶ್ರೀ|| ದತ್ತಾತ್ರೇಯ ಶಾಸ್ತ್ರಿಗಳು
ವೇ|| ಬ್ರ|| ಶ್ರೀ|| ಬಿ. ವಿ. ಶ್ರೀನಿವಾಸಭಟ್ಟರು
ಸುಬ್ಬಯ್ಯನವರು
ವೆಂಕಟಾಚಲಯ್ಯನವರು
ಸೀತಾರಾಮಯ್ಯನವರು
ಕೆ. ಎಸ್. ಶ್ರೀಕಂಠಯ್ಯನವರು
ಕಿಕ್ಕೇರಿ ಸುಬ್ಬರಾಯರು
ಅನಂತನಾರಾಯಣರು
ಸೂರ್ಯನಾರಾಯಣಪ್ಪನವರು
ಶಂಕರ್‌ರವರು
ನಾಗರಾಜರ ತಮ್ಮಂದಿರು
ಅನಿಲ್‌ಕುಮಾರ್ ಶೇಟ್
ವೇ|| ಬ್ರ|| ಶ್ರೀ|| ರಾಮಕೃಷ್ಣ ಶಾಸ್ತ್ರಿಗಳು
ಅರಳೀಕಟ್ಟೆ ನಾಗೇಶರಾಯರು
ಶ್ರೀಮತಿ ಜಯಮ್ಮನವರು
ಪಿ. ಆರ್. ಹರಿಹರನ್‌ರವರು
ಎಂ. ಗೋಪಾಲ್‌ರವರು
ಶ್ರೀಮತಿ ಇಂದಿರಮ್ಮನವರು
ಹೆಚ್. ಎನ್. ರಾಮರಾವ್

ಮೈಸೂರು (ಮುಂದುವರಿದುದು)

ಶ್ರೀಯುತರುಗಳಾದ—

ಹೆಚ್. ಎಸ್. ಕೃಷ್ಣರಾವ್

ಹೆಚ್. ಎಸ್. ಸದಾಶಿವರಾವ್

ಚಿಕ್ಕಲಿಂಗಣ್ಣ ದೇವಸ್ಥಾನಕ್ಕೆ ಬರುವ ಮಹನೀಯರು ಮತ್ತು ಮಹಿಳೆಯರು

**ಬೆಂಗಳೂರು**

ಕೆ. ಎ. ವೆಂಕಟನಾರಾಯಣರವರು

ಎಂ.ವಿ.ರಾಮಚಂದ್ರರಾವ್, ಇಂಜಿನಿಯರ್

ವೈ. ವಿ. ಶ್ರೀನಿವಾಸ್‌ರವರು

ವೈ. ವಿ. ಕೇಶವಮೂರ್ತಿಯವರು

ಶ್ರೀಮತಿ ರುಕ್ಮಿಣಮ್ಮನವರು

ವೈ. ಹೆಚ್. ಶಿವಶಂಕರ್‌ರವರು

ವೈ. ಹೆಚ್. ಶಂಭುಶರ್ಮರವರು

ವೈ. ಹೆಚ್. ರಮೇಶ್‌ರವರು

ಹೆಚ್. ಸಿ. ಸುಬ್ರಹ್ಮಣ್ಯಭಟ್ಟರು

ಟಿ. ವಿ. ಶ್ರೀನಿವಾಸಯ್ಯನರವರು

ನಾಡಿಗ ನಾಗರಾಜರವರು

ಎಮ್. ಆರ್. ಲಕ್ಷ್ಮೀನಾರಾಯಣರಾವ್‌ರವರು

ಎಮ್. ಆರ್. ಶ್ರೀನಿವಾಸರಾವ್‌ರವರು

ದಿ|| ವೆಂಕಣ್ಣಯ್ಯನವರ ಮಕ್ಕಳು

ಡಾ|| ರಾಮಚಂದ್ರರಾವ್‌ರವರು

ಉಬ್ರಾಣಿ ಅನಂತಪ್ಪನವರು ಮತ್ತು ಅವರ ಮಕ್ಕಳು ವೆಂಕಟೇಶಯ್ಯನವರು

ಸೀತಾರಾಮಯ್ಯನವರ ಮಕ್ಕಳು ನಂಜುಂಡಯ್ಯನವರು

ಮನೆವಾರ್ತೆ ತರೀಕೆರೆ ಹಿರಿಯಣ್ಣಯ್ಯನವರು

ಘಂಟೆ ರಾಮಸ್ವಾಮಿಗಳು ಇವರ ಮಕ್ಕಳು ವೆಂಕಟಾಚಲಯ್ಯನವರು

ಕಲ್ಲೂರು ನಾರಾಯಣಪ್ಪನವರು

ಯಗಟಿ ಸತ್ಯನಾರಾಯಣರು ಸಂಕೆರೆ ರಾಮಚಂದ್ರರಾವ್

**ತರೀಕೆರೆ**

ಶ್ರೀಯುತರುಗಳಾದ—

ತರೀಕೆರೆ ಮನವಾರ್ತೆ ರಾಮಚಂದ್ರರಾವ್

ಕಡ್ಲೂರು ಶ್ಯಾ|| ಶ್ರೀನಿವಾಸಯ್ಯನವರು

ಕಡ್ಲೂರು ಸಾಹುಕಾರ್ ನಾರಾಯಣಪ್ಪನವರು

ಕುಡ್ಲೂರು ಶ್ಯಾ|| ವೆಂಕಟರಾಮಯ್ಯನವರು

ವೇ||ಬ್ರ||ಶ್ರೀ|| ತಮ್ಮಯ್ಯಶಾಸ್ತ್ರಿಗಳು

ವೇ||ಬ್ರ||ಶ್ರೀ|| ಹೊನ್ನಪ್ಪಶಾಸ್ತ್ರಿಗಳು

ಬ್ರಾಹ್ಮಣ ಸಂಘದವರು

ಡಾ|| ಹೆಚ್. ಎಸ್. ವೆಂಕಟರಾಮುರವರು

ಡಿ. ರಾಮರಾಯರು

ವೆಂಕೋಬರಾಯರು

ಸಾಹುಕಾರ್ ವಿಶ್ವೇಶ್ವರಯ್ಯನವರು ಮತ್ತು

ಅವರ ಮಕ್ಕಳು ವೆಂಕಟರಾಮ್‌ರವರು

ಹುಚ್ಚುರಾಯರ ಮಕ್ಕಳು

ಕಾಳಿಂಗಪ್ಪನವರು ಮತ್ತು ಅವರ ಮಕ್ಕಳು ಸುಬ್ರಹ್ಮಣ್ಯರವರು

ಶ್ರೀ ಕಾಳಿಂಗಪ್ಪನವರ ಸೋದರಳಿಯಂದಿರು ಗಣೇಶರಾವ್‌ರವರು

ದಿ|| ಫಣಿಯಪ್ಪನವರ ಮಕ್ಕಳು ನಾಗರಾಜರವರು

ಶ್ಯಾ|| ಪಾಪಯ್ಯನವರು

**ಶಿವಮೊಗ್ಗ**

ವೆಂಕಟರಾಮಾಶಾಸ್ತ್ರಿಗಳು, ಬಿ.ಎ., ಎಲ್‌ಎಲ್.ಬಿ., ಅಡ್ವೋಕೇಟ್

ಟಿ. ಎಲ್. ಕಲ್ಲಯ್ಯನವರು, ಬಿ.ಎ., ಎಲ್‌ಎಲ್.ಬಿ., ಅಡ್ವೋಕೇಟ್

ವೈ. ಎಸ್. ಗುಂಡುರಾವ್‌ರವರು

ರಾಘವಯ್ಯನವರ ಮಕ್ಕಳು ಕೃಷ್ಣಮೂರ್ತಿಗಳು, ಅಡ್ವೋಕೇಟ್

ನಾಡಿಗ ಶಂಕರಲಿಂಗಯ್ಯನವರು, ತಹಸೀಲ್ದಾರ್

ವೇ||ಬ್ರ||ಶ್ರೀ|| ಲಕ್ಷ್ಮೀನರಸಿಂಹ ಜೋಯಿಸರು

ವೇ||ಬ್ರ||ಶ್ರೀ|| ವೆಂಕಟರಾಮಭಟ್ಟರು

ಶಿವಮೊಗ್ಗ (ಮುಂದುವರಿದುದು)
ಶ್ರೀಯುತರುಗಳಾದ—
ಶಂಕರಮಠದಲ್ಲಿರುವ ಬ್ರಾಹ್ಮಣ ಸಂಘದವರು
ನಾಗರಾಜರವರು
ವೇಣುಗೋಪಾಲ್‌ರವರು
ವಾಸುದೇವಮೂರ್ತಿಗಳು
ಟಿ. ಎಸ್. ರಾಮಕುಮಾರ್‌ರವರು
ತುಂಗಭದ್ರಾ ಸಕ್ಕರೆ ಕಾರ್ಖಾನೆಯವರು
ಹೊಯ್ಸಳ ಕರ್ನಾಟಕ ಸಂಘದವರು

**ಯಗಟಿ**

ಸತ್ಯನಾರಾಯಣರು
ಶ್ರೀನಿವಾಸಯ್ಯನವರು
ವೈ. ತಿಮ್ಮಯ್ಯನವರು
ಚಿಕ್ಕಾತೂರು ನಾರಾಯಣಮೂರ್ತಿಗಳು
ಕೃಷ್ಣಪ್ಪನವರು
ಶ್ಯಾನುಭೋಗ್ ಹಿರಿಯಣ್ಣಯ್ಯನವರು
ವೇ|| ಬ್ರ|| ಶ್ರೀ|| ಪುರೋಹಿತ ನಾರಾಯಣ ಭಟ್ಟರು
ಶ್ಯಾನುಭೋಗ್ ಸೂರ್ಯನಾರಾಯಣರಾಯರು

**ಅರಸೀಕೆರೆ**

ಹೆಚ್. ಎಸ್. ಶ್ರೀಕಂಠಯ್ಯನವರು
ಹೆಚ್. ಲಕ್ಷ್ಮೀನಾರಣಪ್ಪನವರು
ಬಿ. ಕೆ. ಸತ್ಯನಾರಾಯಣಯ್ಯನವರು
ಬಿ. ಕೆ. ಹಿರಣ್ಣಯ್ಯನವರು
ಕಂದಾಚಾರದ ಲಕ್ಷ್ಮೀನಾರಾಯಣರಾಯರು
ಕಿಕ್ಕೇರಿ ಪುಟ್ಟರಾಮಯ್ಯನವರು
ಕಂದಾಚಾರದ ಹೆಚ್. ಆರ್. ಸುಬ್ಬರಾಯರು ಮತ್ತು

ಶ್ರೀಯುತರುಗಳಾದ—

ಇವರ ಮಕ್ಕಳು ರಾಮಚಂದ್ರರಾಯರು

**ಯಳ್ಳೆಂಬಳಸೆ**

ವೇ||ಬ್ರ||ಶ್ರೀ|| ನರಸಿಂಹಮೂರ್ತಿ ಪುರಾಣಿಕರು
ಭಾಸ್ಕರರಾವ್
ಸಾಹುಕಾರ್ ಸುಬ್ಬಣ್ಣನವರು
ವೇ||ಬ್ರ||ಶ್ರೀ|| ಹಿರಿಯಣ್ಣಯ್ಯನವರು
ಪೋಸ್ಟ್‌ಮಾಸ್ಟರ್ ಕೃಷ್ಣಮೂರ್ತಿಗಳು
ದೇವರಪ್ಪನವರ ಮಕ್ಕಳು

**ಕಳಸಾಪುರ**

ಸುಬ್ಬಾಭಟ್ಟರು
ಸೀತಾರಾಮಯ್ಯನವರು
ಕೆ. ಎಸ್. ನಾರಾಯಣರಾವ್‌ರವರು
ಕೇಶವಮೂರ್ತಿಗಳು
ಹೆಚ್. ಎಸ್. ನಾಗರಾಜ್‌ರವರು
ಕೆ. ಬಿ. ತಿಪ್ಪಯ್ಯನವರು
ಶ್ರೀ ಕೂಡ್ಲೂರು ನಾರಾಣಪ್ಪನವರ ಮಕ್ಕಳು ವೆಂಕಟದಾಸಪ್ಪನವರು

**ಹೊನ್ನವಳ್ಳಿ**

ಕೆ. ರಾಮಚಂದ್ರರಾವ್‌ರವರು
ಬಿ. ಕೆ. ಸತ್ಯನಾರಾಯಣರಾವ್‌ರವರು
ಕೆ. ಎಸ್. ರಾಮಕೃಷ್ಣಯ್ಯನವರು
ಬಿ. ಕೆ. ಅನಂತರಾಮಯ್ಯನವರು
ಹೆಚ್. ಆರ್. ಅನಂತರಾಮಯ್ಯನವರು
ಹೆಚ್. ಆರ್. ಸೂರ್ಯನಾರಾಯಣರಾವ್‌ರವರು
ಕೆ. ಎಸ್. ಸುಬ್ರಹ್ಮಣ್ಯರವರು

ಶ್ರೀಯುತರುಗಳಾದ—

**ಬುಕ್ಕಾಂಬುಧಿ**

ಕಣಬಗಟ್ಟೆ ಶ್ಯಾ॥ ಗುಂಡಪ್ಪನವರು ಮತ್ತು ಇವರ ಮಕ್ಕಳು
ವೇ॥ಬ್ರ॥ಶ್ರೀ॥ ಬಿ. ಕೆ. ರಾಮಕೃಷ್ಣ ಶಾಸ್ತ್ರಿಗಳು
ವೇ॥ಬ್ರ॥ಶ್ರೀ॥ ಸುಬ್ಬಾ ಶಾಸ್ತ್ರಿಗಳು
ನಾಡಿಗರು ಸೀತಾರಾಮಯ್ಯನವರು

**ಅಜ್ಜಂಪುರ**

ಬ್ರಾಹ್ಮಣ ಸಂಘದವರು
ಕ್ಷೇತ್ರಪಾಲಯ್ಯನವರು

**ಹಿರಿಯೂರು**

ನಾಗರಾಜರವರು

**ಭದ್ರಾವತಿ**

ಗಿರಿಯಪ್ಪನವರು

**ಗುಂಡ್ಲುಪೇಟೆ**

ಪಿ. ಆರ್. ಸೀತಾರಾಮ್‌ರವರು

**ತುಮಕೂರು**

ಸ್ರೀ ಕೊಡ್ಲೂರು ನಾರಣಪ್ಪನವರ ಮಕ್ಕಳು ಅನಂತರಾಮಯ್ಯನವರು

**ಸುರಪುರ**

ವೇ॥ಬ್ರ॥ಶ್ರೀ॥ ಅಯ್ಯನವರ ಸುಬ್ಬಣ್ಣನವರು

**ನರಸಿಂಹರಾಜಪುರ**

ಬಿ. ರಂಗಣ್ಣನವರು

ಈ ಪುಸ್ತಕ ಪ್ರಕಟನೆಗೆ ಸಹಾಯ ಸಲ್ಲಿಸಿರಬಹುದಾದ ಅನೇಕ ಮಹನೀಯರ ಹೆಸರುಗಳು ದಾನಿಗಳ ಪಟ್ಟಿಯಲ್ಲಿ ಬಿಟ್ಟುಹೋಗಿರುವ ಸಂಭವವಿದೆ; ಅವರ ಹೆಸರುಗಳನ್ನೂ ಇಲ್ಲಿ ಸ್ಮರಿಸುತ್ತೇನೆ.

———

शङ्करसिद्धान्तः

ಶಂಕರಸಿದ್ಧಾಂತಃ

मूल्यम् ५ रूप्यकाणि

*Copies can be had from :*

1) ADHYATMA PRAKASHA KARYALAYA,
P. O. HOLENARSIPUR-573211, Dist. Hassan.

2) ADHYATMA PRAKASHA KARYALAYA,
No. 68, 2nd Block, Thyagaraja Nagara,
BANGALORE-560 028,

3) M/s VEDANTA BOOK HOUSE,
(Books on Philosophy)
Near UMA Talkies, Chamarajapet,
BANGALORE-560 018.

4) Y. V. Shankaranarayana, *B.E.*,
Superintending Engineer,
Hindustan Ship yard, Chief Engineer's, Office,
P. O. Gandhigram,
VISHAKHAPATNAM-530005. (A. P.)